ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

2. ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2014.

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014 ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು.)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧೀಕಾರ ವಿಧೇಯಕವನ್ನು ನಾವು ತರುತ್ತಿದ್ದೇವೆ. ಬಹು ಮುಖ್ಯವಾಗಿ ಕೆಲವಾರು ಉದ್ದೇಶಗಳನ್ನು ಇಟ್ಟುಕೊಂಡು, ಪ್ರಸ್ತುತ ಈ ಕೆರೆ ಮತ್ತು ಸರೋವರ ನೈಸರ್ಗಿಕ ಮತ್ತು ಮಾನವ ಸೃಷ್ಟಿ ಕಾರಣಗಳಿಂದಾಗಿ ಒತ್ತಡಕ್ಕೆ ಒಳಗಾಗಿ ಕಲುಷಿತವಾಗುವಂಥದ್ದು ಆಗಿದೆ. ನಗರೀಕರಣ ಮತ್ತು ಔದ್ಯೋಮಿಕರಣಗಳ ನಿಟ್ಟಿನಲ್ಲಿ ಒತ್ತಡಗಳ ತೀವ್ರತೆಯು ಕೆರೆಗಳ ಮೇಲೆ ಅವಲಂಬಿತವಾಗಿ ಮುಖ್ಯವಾಗಿ ನಗರವ್ಯಾಪ್ತಿಯಲ್ಲಿ ಕೆರೆಗಳು ಕಲುಷಿತವಾಗುವುದು ಆಗುತ್ತಿದೆ. ಈ ಹಿನ್ನೆಲೆಯಲ್ಲಿ ನಾವು ಒಂದು ವಿಧೇಯಕವನ್ನು ತರುತ್ತಿದ್ದೇವೆ. ಹಿಂದೆ 2002 ರಲ್ಲಿ ನಾವು ಸೊಸೈಟಿ ಕಾಯಿದೆ ಅಡಿಯಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಿದ್ದೆವು. ಅದರಲ್ಲಿ ಈಗಿರುವ ಕೆರೆ ಪ್ರಾಧಿಕಾರದಲ್ಲಿ ಒತ್ತುವರಿಯನ್ನು ತೆರವುಗೊಳಿಸಲು, ಕೆರೆಗಳ ಮಾಲಿನ್ಯ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮವನ್ನು

ಕೈಗೊಳ್ಳಲು ಯಾವುದೇ ಶಾಸನಬದ್ಧ ಅಧಿಕಾರ ಇರಲಿಲ್ಲ. ಅದಕ್ಕಾಗಿ, ಒಂದು ಪರಿಣಾಮಕಾರಿಯಾಗಿ ಕೆಲಸ ಆಗಬೇಕೆನ್ನುವಂಥ ದೃಷ್ಟಿಯಲ್ಲಿ ಈ ವಿಧೇಯಕವನ್ನು ನಾವು ತರುತ್ತಿದ್ದೇವೆ. ಕೆರೆಗಳ ಒತ್ತುವರಿಗಳನ್ನು ತೆರವುಗೊಳಿಸುವುದು, ಅಂತರ್ಜಲವನ್ನು ಹೆಚ್ಚಿಸುವ ಕೆರೆಗಳ ರಕ್ಷಣೆ, ಪರಿಸರ ಆಘಾತ ಅಂದಾಜೀಕರಣ ಅಧ್ಯಯನ ಕೈಗೊಳ್ಳುವುದು, ಕೆರೆಗಳ ನೀರಿನ ಗುಣಮಟ್ಟ ನಿರ್ವಹಣೆ ಮಾಡುವುದು, ಕೆರೆಗಳ ನೀರನ್ನು ಕುಡಿಯುವುದಕ್ಕಾಗಿ, ನೀರಾವರಿಗಾಗಿ, ಶಿಕ್ಷಣ ಅಥವಾ ಪ್ರವಾಸೋದ್ಯಮ ಮತ್ತಿತರ ಉದ್ದೇಶಗಳಿಗೆ ಬಳಸುವುದಕ್ಕೆ ಉತ್ತೇಜನ ನೀಡುವುದು, ಕೆರೆಗಳ ಸಂರಕ್ಷಣೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಕ್ಷೀಣಿಸುತ್ತಿರುವ ಅಂತರ್ಜಲವನ್ನು ಹೆಚ್ಚಿಸುವಂಥ ಕೆರೆಗಳ ಸಂರಕ್ಷಣೆ, ಪುನರುಜ್ಜೀವನ, ಪೂರ್ವಾವಸ್ಥೆ ತಲುಪಿಸುವಂಥ ಈ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಳ್ಳುವಂಥದ್ದು, ಈಗಾಗಲೇ ನಗರವ್ಯಾಪ್ತಿಯ ಹೊರಗೆ ಹಳ್ಳಿಗಾಡಿನಲ್ಲಿ ಕೆರೆ ಅಭಿವೃದ್ಧಿಗಾಗಿ ಪ್ರತ್ಯೇಕವಾದ ಕೆರೆ ಪ್ರಾಧಿಕಾರವನ್ನು ರಚನೆ ಮಾಡಲಾಗಿದೆ. ನ್ಯಾಯಮೂರ್ತಿಗಳಾದ ಶ್ರೀ ಎನ್.ಕೆ. ಪಾಟೀಲ್ ಅವರ ನೇತೃತ್ವದಲ್ಲಿ ಒಂದು ಸಮಿತಿ ಕೆಳಕಂಡ ಕೆಲವು ಶಿಫಾರಸ್ಸುಗಳನ್ನು ಮಾಡಿದೆ. ಬಹುಶಃ ಬೆಂಗಳೂರು ನಗರವನ್ನು ಮುಖ್ಯವಾಗಿ ಆಧಾರವನ್ನಾಗಿ ಇಟ್ಟುಕೊಂಡು ಹೊಸ ಪ್ರದೇಶಗಳು ಸೇರ್ಪಡೆಯಾಗಿ, ಬೇರೆ ಬೇರೆ ಕಾರಣಗಳಿಂದಾಗಿ ಕೊಳಚೆ ನೀರು ಕೆರೆಗೆ ಹೋಗುವುದರಿಂದ ಅಲ್ಲಿ ಮಾಲಿನ್ಯವಾಗುತ್ತದೆ. ಅದನ್ನು ತಡೆದು ಸೂಕ್ತ ರೀತಿಯಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಕೊಳಚೆ ನೀರಿನ ಸಂಸ್ಕರಣ ಘಟಕ ನಿರ್ಮಿಸುವುದು, ರಾಜಕಾಲುವೆ, ಉಪಕಾಲುವೆಗಳ ಸುತ್ತಮುತ್ತ ಕೆಲವು ಪ್ರದೇಶಗಳು ಒತ್ತುವರಿ ಆಗಿದ್ದಲ್ಲಿ ಅದನ್ನು ತೆರವುಗೊಳಿಸಬೇಕೆನ್ನುವಂಥದ್ದು ಕೂಡ ಮಾನ್ಯ ಎನ್.ಕೆ. ಪಾಟೀಲ್ ರವರ ಶಿಫಾರಸ್ಸು ಇದೆ. ಅವರು ಶಿಫಾರಸ್ಸು ಮಾಡಿರುವುದರಲ್ಲಿ ಪ್ರಮುಖವಾದ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 2010ರಲ್ಲಿ ಬೆಂಗಳೂರು ನಗರದ ಜನಸಂಖ್ಯೆ 77 ಲಕ್ಷ ಇದ್ದರೆ, ಪ್ರಸ್ತುತ ಸಾಕಷ್ಟು ದೊಡ್ಡ ಜನಸಂಖ್ಯೆ ಕೂಡ ವಿಸ್ತಾರವಾಗಿದೆ. ಆ ಸಂದರ್ಭದಲ್ಲಿ ಇವತ್ತಿನ ದಿವಸ ನಗರೀಕರಣದಿಂದಾಗಿ

ಕೆರೆಗಳ ಮೇಲೆ ಒತ್ತಡ ಬಂದು ಮಾಲಿನ್ಯ ಆಗತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಒಟ್ಟಾರೆ ನಾವು ಅಂದಾಜು ಮಾಡಿದಂತೆ 293 ಕೆರೆಗಳು ಬೆಂಗಳೂರು ನಗರ ಇರಬಹುದು, ಮೈಸೂರು ಇರಬಹುದು, ಮಂಗಳೂರು ಇರಬಹುದು, ಹುಬ್ಬಳ್ಳಿ, ಧಾರವಾಡ ಇರಬಹುದು, ಇಂಥ ನಗರ ಪ್ರದೇಶಗಳಲ್ಲಿರುವಂಥ ಕೆರೆಗಳನ್ನು ಬಹುಶಃ ಒಂದು ವ್ಯವಸ್ಥಿತವಾಗಿ ಇಟ್ಟುಕೊಳ್ಳುವುದಕ್ಕೆ ಶಾಸನಬದ್ಧವಾದಂಥ ಅಧಿಕಾರವನ್ನು ಕೊಡುವುದರ ಮೂಲಕ ದಂಡ ವಿಧಿಸುವುದನ್ನು, ಕೆರೆಗಳ ಒತ್ತುವರಿಗಳನ್ನು ತೆರವುಗೊಳಿಸುವುದಕ್ಕೆ ಈ ಒಂದು ತಿದ್ದುಪಡಿ ವಿಧೇಯಕವನ್ನು ತರುತ್ತಿದ್ದೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಬೆಂಗಳೂರು ಪ್ರಾಧೀಕಾರದವರು 50 ಎಕರೆ, 100 ಎಕರೆ ಇದ್ದಂಥ ಕೆರೆಗಳನ್ನು ಖಾಲಿ ಮಾಡಿ, ಬಡಾವಣೆ ನಿರ್ಮಾಣ ಮಾಡಿ ಜನರಿಗೆ ಸೈಟ್ ಹಂಚಿದ್ದಾರೆ ಹಾಗೂ ಮನೆಗಳನ್ನು ಕಟ್ಟಿದ್ದಾರೆ. ಈ ಬಿಲ್ ತಂದು ಮುಂದೆ ಅವರನ್ನು ಏನು ಮಾಡುತ್ತೀರಿ? ಕೆಲವು ಭೂಗಳ್ಳರು 20 ಎಕರೆ ಕೆರೆ ಒತ್ತುವರಿ ಮಾಡಿಕೊಂಡಿದ್ದಾರೆ. ನಗರಾಭಿವೃದ್ಧಿ ಇಲಾಖೆಯವರು 50 ಎಕರೆ ಬಡಾವವಣೆಗಳನ್ನು ನಿರ್ಮಾಣ ಮಾಡಿ, 15-25 ವರ್ಷಗಳಿಂದ ಸತತವಾಗಿ ಸೈಟ್‌ಗಳನ್ನು ಹಂಚಿದ್ದಾರೆ. ರೆವಿನ್ಯೂ ಇಲಾಖೆಯ ದಾಖಲೆಗಳನ್ನು ತೆಗೆಸಿದರೆ ಅದರಲ್ಲಿ ಕೆರೆ ಎಂದು ಇದೆ. ಆದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸಂಜಯ್‌ನಗರ, ಜೆ.ಪಿ. ನಗರ ಬಡಾವಣೆಯಲ್ಲಿ 54 ಎಕರೆ ದೊರೆಸಾನಿ ಎಂದು ಕೆರೆ ಇದೆ, ಅದನ್ನು ಲೇಔಟ್ ಮಾಡಿ ಇವತ್ತಿನ ದಿವಸ ಅಲ್ಲಿ ದೊಡ್ಡ ಮನೆಗಳು ಬಂದಿವೆ. ಈ ಬಿಲ್ ಅನ್ನು ತಂದು ಅವರನ್ನೆಲ್ಲಾ ಎಲ್ಲಿಗೆ ಕಳುಹಿಸುತ್ತೀರಿ? ಅದನ್ನು ಸ್ವಲ್ಪ ಗಮನ ಸೆಳೆದರೆ ಒಳ್ಳೆಯದು. ಈ ರೀತಿ ಹಲವಾರು ಕೆರೆಗಳನ್ನು ಕೊಡುತ್ತೇನೆ. ಮಾನ್ಯ ಕೋಳಿವಾಡರವರು ಅಲ್ಲಿ ಕುಳಿತಿದ್ದಾರೆ. ಅವರಿಗೆ ಸದನ ಸಮಿತಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಈಗ ಸ್ವಲ್ಪ ಅನುಭವವಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ತಾವು ವಿಶೇಷವಾಗಿ ಬೆಂಗಳೂರು ನಗರದ ಕೆರೆಗಳ ಬಗ್ಗೆ ಸನ್ಮಾನ್ಯ

ಕೋಳಿವಾಡರವರ ನೇತೃತ್ವದಲ್ಲಿ ಒಂದು ಸದನ ಸಮಿತಿಯನ್ನು ರಚನೆ ಮಾಡಿದ್ದೀರಿ. ಅದನ್ನು ಅಧ್ಯಯನ ಮಾಡುವಾಗ ಈ ರೀತಿಯ ಅನೇಕ ಸಂಗತಿಗಳು ನೆನಪಿಗೆ ಬಂದಿವೆ. ಇವತ್ತಿನ ದಿವಸ ಈ ಪ್ರಾಧೀಕಾರ ಬಹಳ ಅಗತ್ಯವಿತ್ತು. ತಾವು ಹೇಳಿದ ಹಾಗೆ ಬಹಳ ಹಿಂದೆಯೇ ಇದು ಬರಬೇಕಾಗಿತ್ತು. ಪ್ರಾಧೀಕಾರದ ಒಂದು ಹಕ್ಕುಗಳನ್ನು ಕೊಡದೆ ಇರುವುದಕ್ಕೋಸ್ಕರ ಏನು ಕೂಡ ಮಾಡುವುದಕ್ಕೆ ಆಗುತ್ತಿಲ್ಲ. ಬೆಂಗಳೂರಿನಲ್ಲಿ ಎಲ್ಲ ಕೆರೆಗಳು ರೆವಿನ್ಯೂ ಇಲಾಖೆಗೆ ಸೇರಿದ್ದರೂ ಕೂಡ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ BDA, BBMP ಬೇರೆ ಕೆರೆಗಳು ಇವೆ.

ನಿಮ್ಮ definition ನಲ್ಲಿ "ಸರೋವರ ಎಂದರೆ" ಎನ್ನುವಂಥ ಶಬ್ಧ ಇದೆ. "ಸರೋವರ ಎಂದರೆ ಅದರಲ್ಲಿ ನೀರು ಇರಲಿ ಅಥವಾ ಇಲ್ಲದಿರಲಿ" ಎನ್ನುವಂಥ ಒಂದು ಅಂಶ ಸಹ ಈ ಬಿಲ್ಲಿನಲ್ಲಿ ಬರುತ್ತಿದೆ. ಸನ್ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರಿಲ್ಲಿ ಅನೇಕ ಕೆರೆಗಳು ಇದ್ದಿದ್ದು ನಿಜ. ಇವತ್ತು ಅದರಲ್ಲಿ ಅನೇಕ ಕೆರೆಗಳು ಸಂಪೂರ್ಣ ಮಾಯವಾಗಿರುವುದು ಸಹ ನಿಜ. ಈಗ ಸನ್ಮಾನ್ಯ ಕುಮಾರಸ್ವಾಮಿಯವರು ಹೇಳಿದಂತೆ, ಸರ್ಕಾರದ ಏಜೆನ್ಸಿಯಾದ ಬಿ.ಡಿ.ಎ. ನೇ ಮೊನ್ನೆ ಅಧಿಕಾರಿಗಳು ಹೇಳಿದಂತೆ, ಕಂದಾಯ ಇಲಾಖೆಯ permission ಸಹ ತೆಗೆದುಕೊಳ್ಳದೆ ಲೇಔಟ್ ಮಾಡಿ ಸೈಟ್‌ಗಳನ್ನು allot ಮಾಡಿದ್ದು, ಇವತ್ತು ಜನರು ಅಲ್ಲೆಲ್ಲಾ ವಾಸವಾಗಿದ್ದಾರೆ. ಹೀಗಿರುವಾಗ ಹೈಕೋರ್ಟ್ ಅವರನ್ನೆಲ್ಲಾ ತೆಗೆಯಿರಿ ಎಂದು ಹೇಳುತ್ತಿದೆ. ಈಗ ಅವರು ಎಲ್ಲಿಗೆ ಹೋಗಬೇಕು? ನಮಗೆ ಗೊತ್ತಿಲ್ಲ. ಅದಕ್ಕೋಸ್ಕರ ಈ ಒಂದು ಕಾಯಿದೆ ಅಗತ್ಯವಿದ್ದರೂ ಸಹ ಮಾಡುವಾಗ 'ಯಾವುದು ನಿರ್ಜೀವ ಕೆರೆ, ಯಾವುದು ಸಜೀವ ಕೆರೆ' ಎಂದು ನಾವು ಮೊದಲು ತೀರ್ಮಾನ ಮಾಡಬೇಕು. ನಾವು ನಿರ್ಜೀವ ಕೆರೆಯನ್ನು ಸಹ ಈ ಕಾಯದೆಯಡಿ ತಂದರೆ ಅಲ್ಲಿ ವಾಸ ಮಾಡುತ್ತಿರುವವರನ್ನೆಲ್ಲಾ ಏನು ಮಾಡುತ್ತೀರಿ? ಅದಕ್ಕೋಸ್ಕರ, ಸರೋವರ ಎಂದರೆ ಅದರಲ್ಲಿ ನೀರು ಇರಲಿ ಅಥವಾ ಇಲ್ಲದಿರಲಿ, ಕಂದಾಯ ದಾಖಲೆಗಳಲ್ಲಿ ಹೇಳಲಾದ ಸರ್ಕಾರಿ ಕೆರೆ, ಖರಾಬ್ ಕೆರೆ, ಕುಂಟೆ, ಕಟ್ಟೆ ಯಾವುದೇ ಇತರ ಹೆಸರಿನಿಂದ ಕರೆಯುವ ಒಳನಾಡು

ಜಲಮೂಲ ಇವೆಲ್ಲವೂ ಸಹ ಸೇರಿಸಿದ್ದಾರೆ. But the very purpose of this bill will be defeated. Unless ಸರೋವರದ definition ಅನ್ನು ನಾವು ಸರಿಯಾಗಿ ಮಾಡದೇ ಇದ್ದರೆ, ಈಗ ಉದಾಹರಣೆಗೆ ಹೇಳುವುದಾದರೆ ನನ್ನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂಥ ಕಾಮಾಕ್ಷಿಪಾಳ್ಯ ಕೆರೆ, ಸಾಣೆಗುರುವನಹಳ್ಳಿ ಕೆರೆ, ಶಿವನಹಳ್ಳಿ ಕೆರೆ ಎಂದು ಇದೆ. 25–30 ವರ್ಷಗಳ ಹಿಂದೆ ಕೆರೆಯಲ್ಲಿ ನೀರಿದ್ದಿದ್ದನ್ನು ನಾವು ನೋಡಿದ್ದೇವೆ. ಆದರೆ, ಇವತ್ತು ಕೆರೆನೂ ಇಲ್ಲ, ಕೆರೆಗೆ ನೀರು ಬರುವುದಕ್ಕೆ ಅವಕಾಶ ಸಹ ಇಲ್ಲ. ಆದರೆ, ದಾಖಲೆಯಲ್ಲಿ ಅದು ಕೆರೆ ಎಂದು ಇದೆ. ಅಲ್ಲಿ ಸುತ್ತಮುತ್ತಲೂ ವಾಸ ಮಾಡುತ್ತಿರುವವರ ತಲೆ ಮೇಲೆ ಯಾವತ್ತು ಏನಾಗುತ್ತದೆಯೋ ಎನ್ನುವಂಥ ಕತ್ತಿ ತೂಗಾಡುತ್ತಿದೆ. ಅದಕ್ಕೋಸ್ಕರ ಈ ಸರೋವರದ definition ಅನ್ನು ದಯವಿಟ್ಟು 'ಸರೋವರ ಎಂದರೆ ಅದರಲ್ಲಿ ನೀರು ಇರಲಿ ಅಥವಾ ಇಲ್ಲದಿರಲಿ ಅಥವಾ ನೂರು ವರ್ಷಗಳ ಹಿಂದೆ ಇದ್ದಿರಲಿ' ಎನ್ನುವ ಶಬ್ದಗಳನ್ನು ತೆಗೆದು ಹಾಕಿ ಆ definition ಅನ್ನು ಸರಿಯಾಗಿ ಮಾಡಿ. ನಿಜವಾಗಿಯೂ ಇರುವಂಥ ಸರೋವರವನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ.

ಎರಡನೆಯದಾಗಿ, ಬಿಡಿಎ ರೀತಿಯ ಏಜೆನ್ಸಿಗಳೇ ಅತಿಕ್ರಮಣ ಪ್ರವೇಶ ಮಾಡಿದಾಗ, ಒತ್ತುವರಿ ಮಾಡಿ ಕೆರೆಗಳನ್ನು ನಾಶ ಮಾಡಿದಾಗ ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದರ ಬಗ್ಗೆ ದಯವಿಟ್ಟು ಉತ್ತರ ಕೊಡಿ.

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಸಚಿವರು):– ಮಾನ್ಯ ಸಭಾಧ್ಯಕ್ಷರೆ, ಸರೋವರ ಸಂರಕ್ಷಣೆ ಕೆರೆ ಅಭಿವೃದ್ಧಿ ಪ್ರಾಧಿಕಾರವು ಸದುದ್ದೇಶವನ್ನಿಟ್ಟುಕೊಂಡು ತಂದಿರುವ ಬಿಲ್.

ಅಧ್ಯಕ್ಷರು:– ಎಲ್ಲಾ ಶಾಸಕರು ಈ ಬಿಲ್ ಬಗ್ಗೆ ಕೇಳಿ. ಈಗ ಅರಣ್ಯದ್ದೇ ಸಾಕಾಗಿದೆ. ಮತ್ತೆ ಕೆರೆಗಳನ್ನು ಕೊಟ್ಟು ಕಡೆಗೆ ಬಾಯಿಬಡಿದುಕೊಳ್ಳುವ ವಿಚಾರವಾಗಬಾರದು. ಅದ್ದರಿಂದ ಎಲ್ಲರೂ ಈ ಬಿಲ್ ಬಗ್ಗೆ ಸ್ವಲ್ಪ ವಿಚಾರ ಮಾಡಿ.

ಶ್ರೀ ಬಿ. ರಮಾನಾಥ ರೈ:– ತಾವು ಮಾತನಾಡುವಾಗ ಸಜೀವ ಕರೆ, ನಿರ್ಜೀವ ಕೆರೆ ಎಂದು ಬಿಲ್‌ನಲ್ಲಿ ನಮೂದಾಗಿದೆಯೆಂದು ಹೇಳಿದಿರಿ, ಇದರಲ್ಲಿ ಯಾವುದು ಸಜೀವ ಕೆರೆ ಎಂದು ತೀರ್ಮಾನ ಮಾಡಿ ಅದನ್ನಷ್ಟೇ ಈ ವ್ಯಾಪ್ತಿಯಲ್ಲಿಟ್ಟುಕೊಂಡು ಕಾರ್ಯಾಚರಣೆ ನಡೆಸಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. 2010ರ ನಂತರ, ಯಾವುದೇ ಕೆರೆ. . . .

ಅಧ್ಯಕ್ಷರು:– ಮಾನ್ಯ ಮಂತ್ರಿಗಳೆ, ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರುವಂಥ ಕೆರೆಗಳು ಸಹ ಇದಕ್ಕೆ ಸೇರುತ್ತದೆಯೇ?

ಶ್ರೀ ಎಸ್. ಸುರೇಶ್‌ಕುಮಾರ್:– ಅದು Land Development Authority ವ್ಯಾಪ್ತಿಗೆ ಬರುತ್ತದೆ. ಇದು Lake Development Authority ವ್ಯಾಪ್ತಿಗೆ ಬರುತ್ತದೆ.

ಶ್ರೀ ಬಿ. ರಮಾನಾಥ ರೈ:– ಕೆರೆ ಅಭಿವೃದ್ಧಿ ಪ್ರಾಧಿಕಾರ ಎಂದು ಹೇಳಿದರೆ ನಗರ ವ್ಯಾಪ್ತಿಯಿಂದ ಹೊರಗೆ ಇರುವಂಥದ್ದು ಸಣ್ಣ ನೀರಾವರಿ ಕೆರೆಗಳನ್ನು ನೋಡಿಕೊಂಡು ಅದೊಂದು ಪ್ರಾಧಿಕಾರವಿದ್ದು ಸದನ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದೆ. ಇದು ನಗರ ವ್ಯಾಪ್ತಿಯಲ್ಲಿರುವಂಥ ಕೆರೆಗಳು, ಎಲ್ಲವನ್ನೂ ಸಹ ಅದು ಬೇರೆ ಬೇರೆ ಅಧಿಕಾರ ವ್ಯಾಪ್ತಿಯಲ್ಲಿರಬಹುದು, ಉದಾಹರಣೆಗೆ ಕೆಲವು ಬಿಬಿಎಂಪಿ, ಕೆಲವು ಕಂದಾಯ ಇಲಾಖೆ ಮತ್ತು ಕೆಲವು ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿರಬಹುದು, ಬೇರೆ ಬೇರೆ ವ್ಯಾಪ್ತಿಯಲ್ಲಿರುವಂಥದ್ದನ್ನು ನಾವು ಒಂದೇ ಎಂದರೆ ಶಾಸನಸಬದ್ಧವಾಗಿ ಸರೋವರ ಎಂದು ಹೇಳಿ ಸಂರಕ್ಷಣೆ ಮಾಡುವ ರೀತಿಯಲ್ಲಿ ಮತ್ತು ಅದನ್ನು ಅಭಿವೃದ್ಧಿಪಡಿಸುವ ದೃಷ್ಟಿಯಲ್ಲಿ ಈ ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ. ಇದು 11 ಮಹಾನಗರ ಪಾಲಿಕೆ ವ್ಯಾಪ್ತಿ ಮತ್ತು ಬೆಂಗಳೂರು ನಗರ ವ್ಯಾಪ್ತಿಗೆ ಸೇರಿರುವಂಥ ಪ್ರದೇಶದಲ್ಲಿ ಇರುವ ಕೆರೆಗಳಿಗೆ ಸಂಬಂಧಪಟ್ಟಿದೆ. ನಗರ ವ್ಯಾಪ್ತಿಯಿಂದ ಹೊರಗೆ ಇರುವಂಥ ಕೆರೆಗಳಿಗೆ ಪ್ರತ್ಯೇಕವಾದ ವಿಧೇಯಕ ತರಲಾಗಿದೆ. ಪ್ರಸ್ತುತ ಈ ವಿಧೇಯಕ ನಗರ ವ್ಯಾಪ್ತಿಯಲ್ಲಿರುವಂಥ ಕೆರೆಗಳಿಗೆ ಸಂಬಂಧಪಟ್ಟಿದೆ.

ತಾವು ಇನ್ನೊಂದು ಮಾತನ್ನು ಹೇಳಿದಿರಿ, ಬಿಡಿಎಗೆ ಸಂಬಂಧಪಟ್ಟಿರುವಂತೆ ಕೆರೆ ಇರುವ ಜಾಗದಲ್ಲಿ ಒತ್ತುವರಿ ಮಾಡಿ ನಿವೇಶನ ರಚನೆ ಮಾಡಿದರೆ ಅದನ್ನು ತಡೆಗಟ್ಟುವುದಕ್ಕೆ ತಾವೇನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದಕ್ಕೆ ಈಗಾಗಲೇ ಇದೇ ಬಿಲ್ಲಿನ ಕೆಳಭಾಗದಲ್ಲಿ ನಮೂದಿಸಿದ್ದೇವೆ. ಏನೆಂದರೆ, ಯಾವುದೇ ಇತರೆ ಅಧಿಕಾರ ವ್ಯಾಪ್ತಿಯಲ್ಲಿರುವಂಥವರು ಒತ್ತುವರಿ ಮಾಡಿದ ಸಂದರ್ಭದಲ್ಲಿ, ಅದಕ್ಕೆ ಪ್ರವೇಶ ಮಾಡಿದ ಸಂದರ್ಭದಲ್ಲಿ ಕಾನೂನು ಬದ್ಧವಾಗಿ ತೆರವುಗೊಳಿಸುವುದಕ್ಕೆ ಶಾಸನಬದ್ಧವಾಗಿ ಕ್ರಮವನ್ನು ಕೈಗೊಳ್ಳುವುದು.

(ಗೊಂದಲ)

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಇದು ಮತ್ತೊಂದು ಸಮಸ್ಯೆಗೆ ಕಾರಣವಾಗುತ್ತದೆ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:- ಕೆಂಪಾಬುದಿ ಕೆರೆ ಈಗಲೂ ಕಂದಾಯ ದಾಖಲೆಯಲ್ಲಿ ಕೆರೆ ಎಂದು ಇದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಈ ಬಿಲ್ ಪಾಸ್ ಮಾಡಿದರೆ ಕಂಠೀರವ indoor stadium ನ್ನು ಸಹ ಈಗ ತೆರವುಗೊಳಿಸಿ ಒಡೆದುಹಾಕಬೇಕಾಗುತ್ತದೆ.

ಅಧ್ಯಕ್ಷರು:- ಈ ಬಿಲ್ ತಂದರೆ ತೆರವುಗೊಳಿಸಬೇಕಾಗುತ್ತದೆಯೇ, ಆಗಲಿ ಬಿಡಿ, ಇದರ ಸಾಧಕ-ಬಾಧಕಗಳ ಬಗ್ಗೆ ಸರಿಯಾಗಿ ಚರ್ಚೆ ಮಾಡಿ. ಇದು ಮೊದಲನೇ ವಿಧೇಯಕ. ಆಮೇಲೆ ಬಾಯಿ ಬಡಿದುಕೊಳ್ಳಬೇಡಿ.

(ಗೊಂದಲ)

ಶ್ರೀ ಸಿ.ಟಿ. ರವಿ:- ಸರ್ಕಾರದ ಮುಂದಿರುವ ಕೆರೆಗಳೆಷ್ಟು? ಖಾಸಗಿಯವರ ಮುಂದೆ ಇರುವ ಕೆರೆಗಳೆಷ್ಟು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಅದಕ್ಕಾಗಿಯೇ ಹೇಳುತ್ತಿದ್ದೇವೆ, ಈ ಬಿಲ್‌ನ್ನು ಒಂದು ದಿವಸ ಚರ್ಚೆಗೆ ಇಟ್ಟುಕೊಳ್ಳಬೇಕು. ತರಾತುರಿಯಲ್ಲಿ ತಂದರೆ ಗ್ಯಾರಂಟಿ ಮತ್ತೆ ಬೆಂಗಳೂರು ನಗರದಲ್ಲಿ ಬಿಡಿಎ ಗೆ ಹಂಚಿದ್ದೀರಲ್ಲ, ಬೆಂಗಳೂರು ನಗರದಲ್ಲಿ ಕಡತದಲ್ಲಿ ಸರ್ಕಾರಿ ಕೆರೆ ಎಂದು ಇನ್ನೂ ತೋರಿಸುತ್ತೀದ್ದೀರಿ. ಹಲವಾರು ಪ್ರದೇಶದಲ್ಲಿ ಅಭಿವೃದ್ಧಿ ಪ್ರಾಧಿಕಾರದವರೇ ನಿವೇಶನ ನಿರ್ಮಾಣ ಮಾಡಿ ಹಂಚಿಕೆ ಮಾಡಿದ್ದಾರೆ. ಸಾವಿರಾರು ಜನ ಮನೆ ಕಟ್ಟಿದ್ದಾರೆ.

ಅಧ್ಯಕ್ಷರು:– ಆಗಲೇ ಸುರೇಶ್‌ಕುಮಾರ್‌ರವರು ಹೇಳಿದರಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಈಗ ನೀವು ಈ ಬಿಲ್ ತಂದು, ನಾಳೆ ಬೆಳಗ್ಗೆ ಇನ್ನೊಂದು ಹೈಕೋರ್ಟಿನವರಿಗೆ ಕೊಡುತ್ತೀರಾ?

ಅಧ್ಯಕ್ಷರು:– ಹೇಗೆ ಕೊಡುತ್ತಾರೆ? ಕಿತ್ತು ಹಾಕುತ್ತಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅದನ್ನೇ ಮತ್ತೊಂದು ಕತ್ತಿಯನ್ನು ಅವರಿಗೆ ಕೊಡುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್:– ಮಾನ್ಯ ಸಭಾಧ್ಯಕ್ಷರೆ, ಬಹಳ ಆಶ್ಚರ್ಯವಾದ ಸಂಗತಿಯೆಂದರೆ Pollution Control Board ನವರ ಕೆಲಸವೇನು? ಪರಿಸರ ಮಾಲಿನ್ಯವನ್ನು ನಿಲ್ಲಿಸುವುದು. ಸಾಣೆಗುರುವನಹಳ್ಳಿ ಕೆರೆ ಮೈದಾನದಲ್ಲಿ Pollution Control Board ನವರು ಆಡಳಿತ ಕಛೇರಿ ಕಟ್ಟಿದ್ದಾರೆ. ಇದು ಸಾಣೆಗುರುವನಹಳ್ಳಿ ಕೆರೆ, Pollution Control Board ನವರೇ ಕಟ್ಟಿದ ಮೇಲೆ ಬೇರೆಯವರಿಗೆ ಇನ್ನೇನಾಗುತ್ತದೆ? ಸರಿಡಿಸಿಕೊಳ್ಳದೇ ಇದ್ದರೆ, ಸರೋವರದ definition ನ್ನು ಸರಿ ಮಾಡದೇ ಇದ್ದರೆ ಈ ಬಿಲ್‌ನ ಸಾಧಕಕ್ಕಿಂತ ಬಾಧಕವೇ ಹೆಚ್ಚು.

ಅಧ್ಯಕ್ಷರು:– ಆಗಲಿ ಬಿಡಿ, ಬಾಧಕವಾದ ಮೇಲೆನೇ ಸರಿಯಾಗುವುದು ಅದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಆಮೇಲೆ ಮತ್ತೆ ಗುದ್ದಾಡುವ ಸಮಸ್ಯೆ ಬರುತ್ತದೆ. ನಿರ್ಜೀವ ಕೆರೆಗಳು ಎನ್ನುವುದರ ಬಗ್ಗೆ ಸ್ಪಷ್ಟತೆ ಮಾಡದ ಹೊರತು ಈ ಬಿಲ್‌ನ್ನು ಮಾಡಬಾರದು.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಪಟ್ಟಣ ಪ್ರದೇಶದಲ್ಲಿರುವಂಥ ಕಾರ್ಪೋರೇಷನ್ ಇರಬಹುದು, ಬಿಡಿಎ ಇರಬಹುದು ಇವುಗಳ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ಒಂದು ಕಾನೂನು ಇರಲಿಲ್ಲ. ಕಾನೂನಿನಡಿಯಲ್ಲಿ ಇದನ್ನೆಲ್ಲಾ ತಂದು ನಿಯಂತ್ರಣ ಮಾಡಬೇಕು. ಸರ್ಕಾರದ ಉದ್ದೇಶವೇನೆಂದರೆ ರಕ್ಷಣೆ ಮಾಡಬೇಕೆನ್ನುವುದು, ಅದರ difficulties ಏನು ಎನ್ನುವುದರ ಕುರಿತು ಮಾನ್ಯ ಸುರೇಶ್‌ಕುಮಾರ್‌ರವರು, ಕುಮಾರಸ್ವಾಮಿಯವರು ಹೇಳಿದಂಥ ಅಂಶಗಳು ವಾಸ್ತವಿಕ. ಈಗ ಕೆರೆಗಳಲ್ಲಿ ಒತ್ತುವರಿಯಾಗಿದೆ ಎನ್ನುವ ಕಾರಣಕ್ಕೋಸ್ಕರ ಶ್ರೀ ಕೋಳಿವಾಡ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಗಿದ್ದು, ಅದರ ವರದಿ ಸಹ ಬರುತ್ತದೆ. ಆದರೆ, ಒಂದು ಕಾನೂನೇ ಬೇಡ ಎಂದು ಹೇಳುವುದಕ್ಕೆ ಬರುವುದಿಲ್ಲ. ಈಗ ನಾವು ಕಾನೂನಿನಡಿ ಅವಕಾಶ ಮಾಡಿಕೊಡುತ್ತಿದ್ದೇವೆ. ಸೆಕ್ಷನ್ 49 Removal of difficulty: it shall be the, ıf any difficulties arises in giving effect to provisions of this Act, Government may by Order not in consıstent with the provisions of the Act, remove the difficulties within a period of one year from the date of publishıng the Official notification of the Official Gazettee. ಸೆಕ್ಷನ್ 49ನಲ್ಲಿ ನಾವು ಅವಕಾಶವನ್ನು ಮಾಡಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ:- Inconsistency of the Act, inconsistency ಎಂದು ಇದ್ದರೆ confusion ಆಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:- Confusion ಏನೂ ಇಲ್ಲ. ಈಗ already ಬಿಡಿಎ ನವರು ಲೇಔಟ್ ಮಾಡಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:- If there is a difficulty while implementing ಅದು ಸರಿಯಿದೆ. ಒಂದು ಬಾರಿ ಪಾಸ್ ಮಾಡಿ ಮೇಲೆ Act ಗೆ inconsistency ಏನಾಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ:- Inconsistency ಎನ್ನುವುದು ಹೇಗೆ ಎಂದರೆ can you restrict only for implementation? ಬಿಡಿಎನವರೇ ಇವತ್ತು ಲೇಔಟ್ ಮಾಡಿದ್ದಾರೆ. ಕಾರ್ಪೋರೇಷನ್ ಏರಿಯಾದಲ್ಲಿ ಸರ್ಕಾರದವರೆ ಒತ್ತುವರಿ ಮಾಡಿ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಅಂಥ ವಿಶೇಷವಾದ ಸಂದರ್ಭದಲ್ಲಿ ಸರ್ಕಾರ ನೋಟಿಫಿಕೇಷನ್ ಮಾಡುವುದಕ್ಕೆ ಅವಕಾಶವಿರುತ್ತದೆ.

ಶ್ರೀ ಕೆ.ಜಿ. ಬೋಪಯ್ಯ:- ಅದಕ್ಕಾಗಿಯೇ definition ನಲ್ಲಿ change ಮಾಡಿ ಎಂದು ಕೇಳಿದ್ದು.

ಶ್ರೀ ಟಿ.ಬಿ. ಜಯಚಂದ್ರ:- Definition ನಲ್ಲಿ change ಮಾಡುವುದಕ್ಕಿಂತ ಏನಾಗಬಹುದೆಂದು ನೋಡೋಣ.

(ಗೊಂದಲ)

ಶ್ರೀ ಎನ್.ಎಚ್. ಕೋನರೆಡ್ಡಿ:- ಕಾನೂನು ಸಚಿವರಾಗಿ ನೀವು ಒಂದು Act ಮಾಡಬೇಕಾದರೆ ವಿಚಾರ ಮಾಡಿ ಮಾಡಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:- ಒಂದು ರೀತಿಯಲ್ಲಿ ಅಕ್ರಮವನ್ನೆಲ್ಲಾ ಸಕ್ರಮ ಮಾಡಿದಂತೆ ಆಗುತ್ತದೆ.

(ಗೊಂದಲ)

ಶ್ರೀ ಎನ್.ಎಚ್. ಕೋನರೆಡ್ಡಿ:- ಕಾನೂನು ಸಚಿವರೆ, ಒಂದು Act ಮಾಡಬೇಕಾದರೆ ವಿಚಾರ ಮಾಡಿ.

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ:- ಅಕ್ರಮವನ್ನೆಲ್ಲಾ ಸಕ್ರಮ ಮಾಡಿದಂತೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ಹಾಗೇನಾದರೂ ನೀವು. .

ಶ್ರೀ ಟಿ.ಬಿ. ಜಯಚಂದ್ರ:- ನಾನಿನ್ನೂ ಮುಗಿಸಿಲ್ಲ, ಸ್ವಲ್ಪ ಕೇಳಿ.

(ಗೊಂದಲ)

ಅಧ್ಯಕ್ಷರು:- ಅವರು ಪೂರ್ತಿ ಹೇಳಲಿ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ನಾವು ಕಾನೂನು ಮಾಡಿರುವುದು ಯಾವುದೇ ಆದರೂ ಕೂಡ ಅದು prospective ಆಗುತ್ತದೆ. It is prospective from the... official ಆಗಿ Gazette ನಲ್ಲಿ notification ಆದ ನಂತರ ಬರುವಂತಹುದ್ದು. Prospective, Retrospective ಆಗುವುದಿಲ್ಲ. ಸರ್ಕಾರಕ್ಕೆ ಅಧಿಕಾರವಿರುತ್ತದೆ. ಸೆಕ್ಷನ್ 49 ಉಪಯೋಗಿಸಿಕೊಂಡು ಆ ಸಮಸ್ಯೆಗಳನ್ನು ನಿವಾರಣೆ ಮಾಡಿಸುವಂತದ್ದು. ಕೋಳಿವಾಡರವರ ಅಧ್ಯಕ್ಷತೆಯಲ್ಲಿ ಕೊಡುವ ವರದಿಯನ್ನು ಕೂಡಾ ಆಧರಿಸಿ ಒಂದು ತೀರ್ಮಾನ ಕೊಡಬೇಕಾಗುತ್ತದೆ. ಅದನ್ನು ಸರ್ಕಾರ ಮಾಡುತ್ತದೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳುತ್ತಿದ್ದಾರಲ್ಲ, ಸರೋವರದ definition ವ್ಯಾಪ್ತಿಯೊಳಗೆ ಆ ತರಹದ್ದು ಏನಾದರೂ ಬಂದರೆ ಸೆಕ್ಷನ್ 49ನಲ್ಲಿ ಒಂದು provision ಇಟ್ಟುಕೊಂಡಿದ್ದೇವೆ. ಅಂತಹ ತೊಂದರೆಗಳನ್ನು ನಿವಾರಿಸುವುದಕ್ಕೆ ನಾವು ಅಲ್ಲಿಂದ ಒಂದು ವರ್ಷದ ಅವಧಿಯೊಳಗೆಂದು ಹೇಳುತ್ತಾರೆ. ಇದೇ important ನಮಗೆ ಇಲ್ಲಿಯೇ ಅನುಮಾನ. ಇಲ್ಲಿ ಏನಾಗುತ್ತದೆಂದರೆ, ಇದು Pandora's box open ಮಾಡಿದಂತಾಗುತ್ತದೆ. ಏಕೆಂದರೆ, ನೀವು ಅಲ್ಲಿ ಆದ ತಕ್ಷಣ ಇದರೊಳಗೆ ಯಾವ್ಯಾವ ಸರೋವರಗಳು, ಕೆರೆಗಳು ಎಂದು ನೀವು ಮುಟ್ಟಲು ಹೋಗುತ್ತೀರಿ, ಅಲ್ಲಿ ಮನೆ ಕಟ್ಟಿಕೊಂಡಿದ್ದಾರೆ, ಒತ್ತುವರಿ ಮಾಡಿಕೊಂಡಿದ್ದಾರೆ. ಅವರು ಮಾತ್ರ ಸರ್ಕಾರಕ್ಕೆ ಬರುತ್ತಾರೆ. ಆಗ ಆ

ಅಕ್ರಮಗಳನ್ನು ಸಕ್ರಮ ಮಾಡುವುದಕ್ಕೆ ಈ ಅವಕಾಶ ದುರ್ಬಳಕೆ ಆಗುವ ಸಾಧ್ಯತೆಗಳಿವೆ. Section 49, ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ರಕ್ಷಣೆ ಮಾಡುವುದಕ್ಕೆ ಒಳ್ಳೆಯ defense ಆಗುತ್ತದೆ, ಅವಕಾಶವಾಗುತ್ತದೆ, ದುರ್ಬಳಕೆಯಾಗುತ್ತದೆ. ಒಳ್ಳೆಯವರಿಗೆ ಆಗುವುದಿಲ್ಲ. ಇದು ಯಾರಿಗೆ ಆಗುತ್ತದೆ ಎಂದರೆ . . .

ಅಧ್ಯಕ್ಷರು:– ಮತ್ತೆ ಅಕ್ರಮವನ್ನು ಅಕ್ರಮವಾಗಿಯೇ ಇಟ್ಟುಬಿಡುವುದೇನು?

ಶ್ರೀ ವೈ.ಎಸ್.ವಿ. ದತ್ತಾ:– ಯಾರು ಕೆರೆಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೋ, ನೀವು ಕಂಠೀರವ ಸ್ಟೇಡಿಯಂ ಬಿಡಿಸುವುದಕ್ಕೆ ಹೋದಾಗ ಸೆಕ್ಷನ್ 49 apply ಆದರೆ ಒಪ್ಪಿಕೊಳ್ಳೋಣ. Bus stand ಕೆಂಪಾಂಬುದಿ ಕೆರೆಗಳಾದರೆ ಒಪ್ಪಿಕೊಳ್ಳೋಣ. ಧರ್ಮಾಂಬುಧಿ ಕೆರೆಗಾದರೆ ಒಪ್ಪಿಕೊಳ್ಳೋಣ. ಅವರಿಗಲ್ಲ ಅನುಕೂಲವಾಗುವುದು. Real estate, ಕೆರೆಗಳನ್ನೇ ನುಂಗಿಸುವ ಭೂಪರಿದ್ದಾರಲ್ಲ, ಅಂತಹವರೆಲ್ಲಾ ನಮಗೆ ಬಿಡಿ, ನಮಗೆ ಬಿಡಿ ಎಂದು ಈ ಸೆಕ್ಷನ್ 49 ನಲ್ಲಿ ಸರ್ಕಾರದ ಮುಂದೆ ಬರುತ್ತಾರೆ. ಇದು ಇನ್ನೊಂದು ತರಹ ಮತ್ತೆ ಪುನಃ Gazette notification ಗಳು ಇದನ್ನು ಮುಟ್ಟಬಾರದು, ತಟ್ಟಬಾರದು ಎಂದು ಆಗುತ್ತದೆ. ಆದುದರಿಂದ ಖಂಡಿತಾ ಹೇಳುತ್ತೇನೆ. ಇದನ್ನು ಸಮಗ್ರವಾಗಿ ತರಬೇಕು. ಇನ್ನೊಂದು ಇದಕ್ಕೆ ಎಷ್ಟು ಕೆರೆಗಳಿವೆ ಎನ್ನುವುದಕ್ಕೆ ನಮ್ಮ ಬಳಿ ದಾಖಲೆಗಳಿವೆ. ಬೆಂಗಳೂರು ನಗರದಲ್ಲಿ ಎಷ್ಟು ಕೆರೆಗಳು ಜೀವಂತವಾಗಿವೆ, ಎಷ್ಟು ಕೆರೆಗಳು ನೀರಿಲ್ಲದಿದ್ದರೂ ಕೆರೆಗಳು ಎಂದು ಇವೆ, ಅವು ಹಾಗೇ ಉಳಿದುಕೊಂಡಿವೆ ಎನ್ನುವ ಪಟ್ಟಿ, ನನ್ನ ಹೆಸರು ಸರಿಯಾಗಿದ್ದರೆ 1985 ರಲ್ಲಿ Gazette notification ಆಗಿ ಎಲ್. ಲಕ್ಷ್ಮಣರಾವ್ ಕಮಿಟಿ ಸಂಪೂರ್ಣವಾಗಿ ಬೆಂಗಳೂರನ್ನೂ ಅಡ್ಡಾಡಿ ಇಷ್ಟು ಕೆರೆಗಳು ಎಂದು ಕೊಟ್ಟು ಅಷ್ಟೂ ಕೆರೆಗಳು Gazette notification ಆಗಿ ಇಷ್ಟು ಕೆರೆಗಳು ಬೆಂಗಳೂರು ನಗರದಲ್ಲಿ ಎಂದು ಸ್ಪಷ್ಟವಾಗಿವೆ. ಆ ದಾಖಲೆಯನ್ನು ನೀವು base ಆಗಿಟ್ಟುಕೊಂಡು ಹೊರಟರೆ ಕೆರೆಗಳ್ಳರನ್ನೂ ಮಟ್ಟ ಹಾಕಬಹುದು, ಭೂಗಳ್ಳರನ್ನೂ ಮಟ್ಟ ಹಾಕಬಹುದು. ಅದನ್ನು ಯಾರು ನುಂಗಿ ನೀರು

ಕುಡಿದಿದ್ದಾರೆ ಅವರನ್ನೆಲ್ಲಾ ತಹಬದಿಗೆ ತರಬೇಕು. ಅಂತಹುದನ್ನು ತನ್ನಿ ನಾವು ಮೆಚ್ಚಿಕೊಳ್ಳುತ್ತೇವೆ.

ಅಧ್ಯಕ್ಷರು:– ಆಯಿತು ಹೇಳಿ, ಮೂವ್ ಮಾಡಿ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಈಗ ತಮಗೆಲ್ಲಾ ಗೊತ್ತಿದೆ. ನಗರ ವ್ಯಾಪ್ತಿಯಲ್ಲಿ ಬೇರೆ ಬೇರೆ ಕಾರಣಗಳಿಂದ ರಾಜಕಾಲುವೆಗಳು ಮುಚ್ಚಿರುವಂತಹುದ್ದು, ಕೆರೆಗಳಲ್ಲಿ ಹೂಳು ತುಂಬಿ ಕಲುಷಿತವಾಗಿರುವುದು. ಇವಕ್ಕೆ ಯಾವುದೋ ಒಂದು ಕ್ರಮವನ್ನು ಕೈಗೊಳ್ಳಬೇಕು. ಯಥಾಸ್ಥಿತಿಯಲ್ಲಿ ಉಳಿಸುವುದು ಸಾಧುವಲ್ಲ ಎಂಬುದು ನಮ್ಮ ಅಭಿಪ್ರಾಯ. ಇದರಿಂದಾಗಿ ಯಾರು ಒತ್ತುವರಿದಾರರಿಗೆ ತೊಂದರೆಯಾಗುತ್ತದೆ, ನಾವು ಒತ್ತುವರಿದಾರರ ಪರವಾಗಿ ವಕಾಲತ್ತು ಮಾಡುವ ವೇದಿಕೆ ಇದಾಗಬಾರದೆಂಬ ಮಾತನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಖಂಡಿತವಾಗಿ ಸುರೇಶ್ ಕುಮಾರ್ ರವರು ಏನು ಮಾತನ್ನು ಹೇಳಿದ್ದಾರೆ, ಸಜೀವ ಕೆರೆ ಯಾವುದು? ನಿರ್ಜೀವ ಕೆರೆ ಯಾವುದು ಎಂಬುದರ ಬಗ್ಗೆ ಯೋಚನೆ ಮಾಡಬೇಕು. ಹಿರಿಯ ಶಾಸಕರಾದ ಕುಮಾರಸ್ವಾಮಿಯವರು ಹೇಳಿರುವುದು ಒತ್ತುವರಿದಾರರಿಗೆ ತೊಂದರೆಯಾಗುತ್ತದೆ, ಅದು ಖಂಡಿತವಾಗಿ ಒತ್ತುವರಿದಾರರ ಪರವಾಗಿ ನಾವು ವಕಾಲತ್ತು ಮಾಡಿದಂತಾಗುತ್ತದೆ ಎಂದು ನನ್ನ ಮನಸ್ಸಿನಲ್ಲಿರುವ ಅಭಿಪ್ರಾಯ. ತಾವು ಇದನ್ನು ವಿಶಾಲವಾದ ದೃಷ್ಟಿಯಲ್ಲಿ ನೋಡಬೇಕು. ನಮಗೆ ಇವತ್ತು ನಗರ ಬೆಳೆಯುವ, ವಿಸ್ತಾರವಾಗುವ ಸಂದರ್ಭದಲ್ಲಿ . .

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನೋಡಿ ಯಾವುದೇ ಒಳ್ಳೆಯ ಕೆಲಸ ಮಾಡಬೇಕಾದರೆ. . . ಇದಕ್ಕೇನಾದರೂ ತೊಂದರೆಯಾಗುವಂತಹುದು ಇದ್ದರೆ. .

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ:– ಸಮಿತಿ ಮಾಡಿದ್ದೀರಿ, ಸಮಿತಿಯ ವರದಿ ಬರಲಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನೋಡಿ ಬೆಂಗಳೂರು ನಗರದಲ್ಲಿ . . .

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ:– ಸಮಿತಿಯ ವರದಿ ಬರಲಿ, ಅದನ್ನು ಆಧಿರಿಸಿ ಅನುಕೂಲ–ಅನಾನುಕೂಲದ ಬಗ್ಗೆ ಒಂದು ದಿನವೆಲ್ಲಾ ಸದನ ಚರ್ಚೆ ಮಾಡಲಿ. ನಂತರ ಕಾನೂನು ತನ್ನಿ. ಅದುವರೆಗೆ ತರಬೇಡಿ. ಇಂತಹುದನ್ನು ತಂದು. . . ಗ್ರಾಮ ಪಂಚಾಯಿತಿಯಲ್ಲಿ ತಂದು ಎಲ್ಲಾ ಅನುಭವಿಸುತ್ತಿದ್ದಾರೆ. ಈಗಿರುವ ಕಾನೂನನ್ನೇ implement ಮಾಡಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ನಿಯಮ ಮಾಡುವುದಕ್ಕೆ ಇಂತಹುದನ್ನು ಮಾಡುವಾಗ ಎಲ್ಲವನ್ನೂ ಪರಿಗಣಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಪಟ್ಟಭದ್ರ ಹಿತಾಸಕ್ತಿಗಳ ಪರವಾಗಿ ವಕಾಲತ್ತು ಮಾಡುವ ಮಾತುಗಳು ಇಲ್ಲಿ ಬರಬಾರದು.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಸಚಿವರು ಹೀಗೆಲ್ಲಾ ಏನೇನೋ ಅರ್ಥೈಸಬಾರದು.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಮುಂದೆ ಕಾನೂನು ಬಂದರೆ ಯಾವುದೇ ಸರ್ಕಾರವನ್ನು ದಿಕ್ಕು ತಪ್ಪಿಸುವಂತಹ ಪ್ರಬಲವಾದ ಶಕ್ತಿಗಳಿರುತ್ತವೆ. ಆ ಎಚ್ಚರಿಕೆ, ಆ ಆತಂಕ ಹೇಳುತ್ತಿದ್ದೇವೆ. ನಿಮ್ಮ ಬಗ್ಗೆ ಅಲ್ಲ.

(ಗೊಂದಲ)

ಅಧ್ಯಕ್ಷರು:- ಹೀಗಲ್ಲ. ಒಂದು ಬಿಲ್ ಮೇಲೆ ನೀವು ಚರ್ಚೆ ಮಾಡುವುದಾದರೆ ಮಾಡಿ. ಈಗ ಚರ್ಚೆಯೆಲ್ಲಾ ಆಯಿತು ಎಂದು ಹೇಳಿ ನಾನು ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಉತ್ತರ ಕೊಟ್ಟ ಮೇಲೆ ನಾನು ಮತಕ್ಕೆ ಹಾಕಬೇಕು. ಈಗ ಇದು ವಿಧಾನವೇ?

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ:- ಯಾವ ರಕ್ಷಣೆ ಮಾಡಿದ್ದೀರಿ? ಇರುವ ಕಾನೂನಿನೊಳಗೆ ಏನು ರಕ್ಷಣೆ ಮಾಡಿದ್ದೀರಿ? ವರದಿ ಬರಲಿ, ಸಮಿತಿಯ ವರದಿ ತರಿಸಿಕೊಳ್ಳಿ. ನೀವು ಸಮಿತಿ ಮಾಡಿಲ್ಲವೇ? ಇಷ್ಟು ವರ್ಷ ಏನು ಮಾಡುತ್ತಿದ್ದೀರಿ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸದನ ಸಮಿತಿ ಮಾಡಿದ್ದೀರಿ, ಒಂದು 6 ತಿಂಗಳು ಸಮಯ ತೆಗೆದುಕೊಳ್ಳಿ. ಈಗಲೇ ಎಲ್ಲವನ್ನು set-right ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಕೆರೆಗಳನ್ನು ಹೇಗೆ ರಕ್ಷಣೆ ಮಾಡುವುದು?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಒಂದು 6 ತಿಂಗಳು ಮುಂದಕ್ಕೆ ಹಾಕಿಕೊಳ್ಳಿ. ಸಮಿತಿ ವರದಿಯನ್ನು ಕೊಡಲಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ರೂಲ್ಸ್ ಮಾಡುತ್ತೇವಲ್ಲ, Act ಪಾಸ್ ಆದ ಮೇಲೆ ರೂಲ್ಸ್ ಮಾಡುವ ಸಂದರ್ಭದಲ್ಲಿ ನೀವು

ಹೇಳಿದ್ದೆಲ್ಲವನ್ನೂ ಕೂಡಾ consider ಮಾಡೋಣ. ಕಾನೂನೇ ಬೇಡವೆಂದರೆ ಹೇಗಾಗುತ್ತದೆ?

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ರೂಲ್ಸ್ ಮಾಡುವಾಗ ಅದನ್ನು ಸರಿ ಪಡಿಸುವ ಕೆಲಸವನ್ನು ಮಾಡುತ್ತೇವೆ. ಯಥಾಸ್ಥಿತಿಯಲ್ಲಿ ಉಳಿಸಬೇಕೆನ್ನುವುದು ಸಾಧುವಾದ ಮಾತಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಒಂದು ನಿಮಿಷ ಇರಿ ಸರ್. ನೀವು ರೂಲ್ಸ್ ಮಾಡಬೇಕೆಂದು ಹೇಳುತ್ತೀರಿ. 1985-86 ರಲ್ಲಿ Urban Development Department ನಲ್ಲಿ ಇದೇ ಸರ್ಕಾರ ತಂದಿತ್ತಲ್ಲ ಕಾನೂನನ್ನು, ಅದಾದ ಮೇಲೆ ಕೆರೆಯನ್ನು ನುಂಗಿ ಹಾಕಿದ್ದಾರಲ್ಲ, ಇಲ್ಲಿಯವರೆಗೆ ಯಾರ ಮೇಲೆ action ತೆಗೆದುಕೊಂಡಿದ್ದೀರಿ? ನಿಮ್ಮ ಕಾನೂನು ಇಟ್ಟುಕೊಂಡು ಏನು ಮಾಡುತ್ತೀರಿ? ನೀವು ತಂದಿರುವ ಕಾನೂನನ್ನು ಧಿಕ್ಕರಿಸಿ 25 ವರ್ಷದಿಂದ ಮಾಡಿದ್ದಾರಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಕಾನೂನು ತರುವುದೇ ಬೇಡವೆಂದೇನು? ಅವುಗಳ ರಕ್ಷಣೆಗೆ ಕಾನೂನೇ ಬೇಡವೇನು?

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ:- ಕಾನೂನು ತರಬೇಕಾದರೆ ಎಲ್ಲರಿಗೂ . . .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ರೂಲ್ಸ್ ತರುವಂತಹ ಸಂದರ್ಭದಲ್ಲಿ ಇವೆಲ್ಲವನ್ನೂ ಕೂಡಾ consider ಮಾಡಬೇಕಾಗುತ್ತದೆ. ಕಾನೂನೇ ಬೇಡವೆಂದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಭೂಗಳ್ಳರಿಗೆ ರಕ್ಷಣೆ ಕೊಡಲಿಕ್ಕೆ ಈ ಬಿಲ್ ತರುವುದು ನೀವು?

(ಗೊಂದಲ)

ಅಧ್ಯಕ್ಷರು:- ಅದು ಹೇಳುವುದಕ್ಕೆ ಆಗುವುದಿಲ್ಲ. ಕುಮಾರಸ್ವಾಮಿಯವರೆ, . . .

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಕಾನೂನು ತರುವುದನ್ನು ನಾವು ಬೇಡವೆಂದು ಹೇಳಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಕಾನೂನು ಇಲ್ಲದ್ದಕ್ಕೆ ಮಾಡಲಾಗಿಲ್ಲ. ಕಾನೂನು ತಂದ ಮೇಲೆ ಅದನ್ನು ಜಾರಿಗೊಳಿಸುವ ಬಗ್ಗೆ ಕ್ರಮ ತೆಗೆದುಕೊಂಡೇ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಯಾರಿಗೆ ಕಾನೂನು ತರುತ್ತಿದ್ದೀರಿ? ಯಾರಿಗೋಸ್ಕರ? ಈ ಕಾನೂನನ್ನು ನೀವು ಏನು ಸರ್ಕಾರದ ಆಸ್ತಿಯನ್ನು ಉಳಿಸುವುದಕ್ಕೆ ತಂದಿದ್ದೇರೇನು?

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಶಾಸನಬದ್ಧವಾದ ಕಾನೂನು ಇಲ್ಲದ ಕಾರಣಕ್ಕಾಗಿ ಇದನ್ನು ತೆರವು ಮಾಡಲು ಸಾಧ್ಯವಾಗಲಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಸಾಮಾನ್ಯ ಜನರಿಗೆ ಇದು ಮತ್ತೊಂದು ತೂಗುಗತ್ತಿಯಾಗುತ್ತದೆ. ಅವರು ನಾಳೆ ದಿನ ಸಂಕಟ ಅನುಭವಿಸುತ್ತಾರೆ, ಯಾರ್‍ಯಾರು ಈಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ . . .

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಸನ್ಮಾನ್ಯ ಗೌರವಾನ್ವಿತ ಹಿರಿಯ ಸದಸ್ಯರಲ್ಲಿ, ನಾನು ರೂಲ್ಸ್‌ನಲ್ಲಿ ಸಾಮಾನ್ಯ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ಅದರ ಜೊತೆಗೆ ಖಂಡಿತವಾಗಿ ಈ ಕೆರೆಗಳನ್ನು ಯಥಾಸ್ಥಿತಿಯಲ್ಲಿ ಉಳಿಸುವುದು ಸಾಧುವಲ್ಲ. ಖಂಡಿತವಾಗಿ ಇದಕ್ಕೆ ಒಂದೂ ಶಾಸನಬದ್ಧವಾದ ಕಾನೂನು ತರುವುದು ಅಗತ್ಯವಿದೆ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:– ಅಧಿಕಾರಿಗಳ ಆಟ ಆಗ ಪ್ರಾರಂಭವಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅವಸರ ಏನು?

(ಗೊಂದಲ)

ಶ್ರೀ ಸಿ.ಟಿ. ರವಿ:– ರೂಲ್ಸ್ ಸುಪ್ರೀಮೋ ಅಥವಾ ಆ್ಯಕ್ಟ್‌ಗೆ against ಆಗಿ ರೂಲ್ಸ್ ಮಾಡಲಾಗುತ್ತದೆಯೇ? It it possible to . .

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ:– ಒಂದೇ ಬಾರಿ ತರಬಹುದಲ್ಲ, ಆತುರವೇಕೆ?

(ಗೊಂದಲ)

ಅಧ್ಯಕ್ಷರು:– ಈಗ ಆಯಿತು ಬಿಡಿ. ಚರ್ಚೆ ಸಾಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇಲ್ಲ ಅಧ್ಯಕ್ಷರೆ, ನಮ್ಮ ಉದ್ದೇಶ ಬೇರೆ. ಬಜೆಟ್ ಅಧಿವೇಶನದಲ್ಲಿ ತೆಗೆದುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ:- ಕಾಗೇರಿಯವರೆ, ಅರ್ಥ ಮಾಡಿಕೊಳ್ಳಿ. ಈಗ ಎಲ್ಲಾ ಕೆರೆಗಳನ್ನು ಸಂರಕ್ಷಣೆ ಮಾಡುವುದಕ್ಕೆ ರಾಜ್ಯದಲ್ಲಿ ಒಂದು ಕಾನೂನು ಇದೆ, Lake Development Authority. ಆದರೆ, ಪಟ್ಟಣ ಪ್ರದೇಶಗಳಿಗೆ ಮಾತ್ರ ಕಾನೂನು ಇರಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಸರಿ. ಕಾನೂನಿನ ಬಗ್ಗೆ ವಿರೋಧವಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ಕೇಳಿ. That gap is there. Now you have to fill up the gap by bringing a legislation.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮುಂದಿನ ಬಜೆಟ್ ಅಧಿವೇಶನದಲ್ಲಿ ತೆಗೆದುಕೊಳ್ಳಿ

ಶ್ರೀ ಟಿ.ಬಿ. ಜಯಚಂದ್ರ:- ಇದಾದ ಮೇಲೆ ರೂಲ್ಸ್ ಮಾಡಬೇಕಾಗುತ್ತದೆ. ಸಾಧಕ-ಬಾಧಕಗಳನ್ನು ನೋಡಿಯೇ ರೂಲ್ಸ್ ಮಾಡಬೇಕಾಗುತ್ತದೆ. ಆಗ ಚರ್ಚೆ ಮಾಡೋಣ, ಅದಕ್ಕೇನು?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್:- ಒಪ್ಪುತ್ತೇವೆ. ರೂಲ್ಸನ್ನು ಮಾಡಬೇಕು. Act ಗೆ against ಆಗಿ contravention with the act….

ಶ್ರೀ ಬಿ. ರಮಾನಾಥ ರೈ:- ಮಾನ್ಯ ಅಧ್ಯಕ್ಷರೆ, ನಗರದಲ್ಲಿರುವ ಕೆರೆಗಳ ಸಂರಕ್ಷಣೆಗಾಗಿ ನಾವು ಇದೇ ರೀತಿಯ ವಿಧೇಯಕವನ್ನು ತಂದಿದ್ದೇವೆ. ನಗರದ ಹೊರಗಡೆ ಇರುವ ಕೆರೆಗಳನ್ನು ಸಂರಕ್ಷಣೆ ಮಾಡುವುದಕ್ಕೆ ಮಾನ್ಯ ಸಚಿವರು ವಿಧೇಯಕವನ್ನು ತಂದಿದ್ದರು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಸಂಘರ್ಷ ಇದ್ದೇ ಇರುತ್ತದೆ. ಇಲ್ಲವೆಂದು ಹೇಳುವುದಿಲ್ಲ. ಇಲ್ಲಿಯವರೆಗೆ ಕಾನೂನು ಇರಲಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್:- ನಾವು ಯಾರೂ ಕೂಡಾ, ಈ ಸದನದ ಒಬ್ಬರೇ ಒಬ್ಬರು ಸದಸ್ಯರೂ ಕೂಡಾ ಈ ವಿಧೇಯಕದ ವಿರುದ್ಧ ಅಲ್ಲ, ಕಾನೂನು ವಿರುದ್ಧ ಅಲ್ಲ. ಆದರೆ, ಕಾನೂನು ಕೇವಲ ಪೇಪರಿನಲ್ಲಿ ಮಾತ್ರ ಉಳಿದುಕೊಳ್ಳಬಾರದು. ಅದು ಜಾರಿಗೆ ಬರಬೇಕು.

ಅಧ್ಯಕ್ಷರು:- ಸುರೇಶ್ ಕುಮಾರ್ ರವರೆ ಅಂದ ಮೇಲೆ ನೀವು ಇದನ್ನು ಬೇಕೆಂದು ಸ್ವಾಗವನ್ನೂ ಮಾಡುತ್ತೀರಿ.

ಶ್ರೀ ಎಸ್. ಸುರೇಶ್ ಕುಮಾರ್:- ಆದರೆ definition ಬದಲಿಸಬೇಕು.

ಶ್ರೀ ಬಿ. ರಮಾನಾಥ ರೈ:- ಬೇಡವೆಂದು ಹೇಳುತ್ತೀರಿ.

ಅಧ್ಯಕ್ಷರು:- ಆಡಳಿತ ಮಾಡತಕ್ಕಂತಹವರು ಅದನ್ನು ಕಾರ್ಯಗತ ಮಾಡುವ ಇಚ್ಛಾಶಕ್ತಿ ಇರಬೇಕು.

ಶ್ರೀ ಟಿ.ಬಿ. ಜಯಚಂದ್ರ:- Implementation ಮಾಡುವಾಗ ತೊಂದರೆಯಾಗುತ್ತದೆ. ನಾನು ಒಪ್ಪುತ್ತೇನೆ.

ಶ್ರೀ ಬಿ. ರಮಾನಾಥ ರೈ:- ಪರೋಕ್ಷವಾಗಿ ಒತ್ತುವರಿಯಾಗಿರುವ ಕೆರೆಗಳ ರಕ್ಷಣೆ ಮಾಡತಕ್ಕಂತಹ ದೃಷ್ಟಿಕೋನ ಇಲ್ಲದೆ ಆಗತಕ್ಕಂತಹ ಎನ್ನುವ ಮಾತುಗಳು ಬರಬಾರದು. ಇದಕ್ಕೆ ಒಂದು ಕಾನೂನು ಬದ್ಧವಾದ . . .

(ಗೊಂದಲ)

ಅಧ್ಯಕ್ಷರು:- ವಿಶ್ವನಾಥ್‌ರವರೇ, ನೀವು ವಿಧೇಯಕದ ಮೇಲೆ ಚರ್ಚೆ ಮಾಡಬೇಕೆಂದು ಅಪೇಕ್ಷೆ ಇದ್ದರೆ ಚರ್ಚೆ ಮಾಡಿ ಅವಕಾಶ ಮಾಡಿ ಕೊಡುತ್ತೇನೆ. ಈ ಚರ್ಚೆ ಮಾಡುವುದಕ್ಕೆ ನೀವು ಯಾರೂ ಆಸಕ್ತಿ ತೋರಿಸಲಿಲ್ಲ. ಅವರು ವಿಧೇಯಕ ಪಾಸ್ ಮಾಡುವುದಕ್ಕೆ ಉತ್ತರ ಕೊಡುವ ಹಂತದಲ್ಲಿ ಪ್ರಶ್ನೆ ಆಗಿ ತಾವು ಕೇಳುತ್ತಿದ್ದೀರಿ. ಇದು ವಿಧಾನ ಅಲ್ಲ. ಒಂದು ವಿಧೆಯಕದ ಮೇಲೆ ನಡೆಯುವಂತಹ ಚರ್ಚೆಯ ಸ್ವರೂಪ ಕೂಡ ಅಲ್ಲ.

ನಿಮಗೆ initiate ಮಾಡುವುದಕ್ಕೂ ಅವಕಾಶ ಕೊಟ್ಟಿದ್ದೇವೆ. ನಿಮಗೆ ಚರ್ಚೆ ಮಾಡುವದಕ್ಕೂ ಅವಕಾಶ ಕೊಟ್ಟಿದ್ದೇವೆ. ಆಗ ನೀವು ಯಾವ ಸೆಕ್ಷನ್ ಯಾವುದಕ್ಕೆ ವಿರುದ್ಧವಾಗಿದೆ ಎಂಬ ಬಗ್ಗೆ ನೀವು ಪ್ರಸ್ತಾಪ ಮಾಡಲಿಲ್ಲ. ಈಗ ಅವರು ಬಿಲ್ ಪಾಸ್ ಮಾಡುವುದಕ್ಕೋಸ್ಕರ ಉತ್ತರ ಕೊಡುವಾಗ ಅದು ಹಾಗಲ್ಲ, ಹೀಗಲ್ಲ ಎಂದು ಹೇಳುವುದು ಸರಿಯಾ?

ಶ್ರೀ ಎಸ್.ಆರ್. ವಿಶ್ವನಾಥ್:- ಸಮಸ್ಯೆ ಆದರೆ ನೀವೇ ಇದರ ರಕ್ಷಣೆಗೆ ಬರಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- Consequence ಏನಾಗುತ್ತದೆ ಅದನ್ನೂ ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಸಭಾಧ್ಯಕ್ಷರೆ, ಬಹಳ ದೂರಗಾಮಿಯಾದ ದುಷ್ಪರಿಣಾಮಗಳ ಬಗ್ಗೆಯೂ ನಾವು ಯೋಚನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು:- ದತ್ತಾರವರೇ ನಿಮ್ಮ ಅಭಿಪ್ರಾಯಕ್ಕೆ ನಾನು ತದ್ವಿರುದ್ಧ ಅಲ್ಲ. ಅದಕ್ಕೇ ನಾನು ಹೇಳುತ್ತಿದ್ದೆನೆ, ಶಾಸಕರು ಎಲ್ಲಾ ಕೂತಿದ್ದೀರಿ ಇಂತಹ ಕಾನೂನು ತರುವುದರಿಂದ ಏನೂ ಸಾಧಕ ಬಾಧಕಗಳ ಬಗ್ಗೆ ವಿಚಾರ ಮಾಡಿ ಎಂದರೆ, ಕೆಲವರು ಹೀಗೆ ಕೂತಿದ್ದಾರೆ, ಕೆಲವರು ಹಾಗೆ ಕೂತಿದ್ದಾರೆ. ನೀವು ಎದ್ದೆದ್ದು ಮಾತನಾಡುತ್ತಿದ್ದೀರಿ. ಬಿಲ್ ಬಗ್ಗೆ ಚರ್ಚೆ ಮಾಡುವುದಕ್ಕೆ ಏನಾಗಿತ್ತು ನಿಮಗೆ ನಾನು ಬೇಡವೆಂದು ಹೇಳಿದೆನಾ?

ಶ್ರೀ ವೈ.ಎಸ್.ವಿ. ದತ್ತಾ:- ಮಂತ್ರಿಗಳು ಉತ್ತರ ಕೊಟ್ಟ ಮೇಲೆ clarification ಕೇಳುವ ರೂಪದಲ್ಲಿಯೂ ಚರ್ಚೆ ಮಾಡಬಹುದು.

ಅಧ್ಯಕ್ಷರು:- ಮೊದಲೇ introduce ಮಾಡುವಾಗಲೇ ಅದನ್ನು ವಿಶ್ಲೇಷಣೆ ಮಾಡಿ ಹೇಳಿದ್ದಾರೆ.

ಶ್ರೀ ಜಿ.ಟಿ. ದೇವೇಗೌಡ:- ಎಲ್ಲಿ introduce ಮಾಡಿದ್ದಾರೆ, ಕ್ರಮಬದ್ಧವಾಗಿ ಏನು ತಂದಿದ್ದಾರೆ?

ಶ್ರೀ ಸಿ.ಟಿ. ರವಿ:- ಅವರು ಹೇಳುವಾಗ ಚೆನ್ನಾಗಿ ಕಾಣಿಸಿತು. ಈಗ ಓದುತ್ತಾ ಹೋದ ಹಾಗೆಲ್ಲ ಅದರ plus ಏನು minus ಏನೆಂದು ಅರ್ಥವಾಗುತ್ತದೆ.

ಅಧ್ಯಕ್ಷರು:- ಓದುತ್ತಾ ಓದುತ್ತಾ ಎಂದರೆ ಇವತ್ತಾ ಅದನ್ನು ಮಂಡಿಸಿದ್ದು? ನಿನ್ನೆಯ ಅಜೆಂಡಾದಲ್ಲಿ ಇದೆ.

ಶ್ರೀ ಸಿ.ಟಿ. ರವಿ:- ನಮಗೆ ಕಾಪಿ ಸಿಕ್ಕಿದ್ದು ಈಗ.

ಅಧ್ಯಕ್ಷರು:- ಅಜೆಂಡಾದಲ್ಲಿ ಇರಲಿಲ್ಲವಾ? ಮೊನ್ನೆನೇ ಬಂದಿತ್ತು.

ಶ್ರೀ ಟಿ.ಬಿ. ಜಯಚಂದ್ರ:- Introduce ಆಗಿ ಬಹಳ ದಿನ ಆಯಿತು.

ಶ್ರೀ ಬಿ.ಆರ್. ಪಾಟೀಲ್:- ಬಿಲ್ ಪ್ರತಿಗಳೆಲ್ಲಾ ಈಗ ಬಂದವು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಬಿಲ್ಲಿನ ಪ್ರತಿಗಳನ್ನು ಈಗ ಹಂಚುತ್ತಿದ್ದಾರೆ. ಬೇರೆ ಬೇರೆ ಅಥಾರಿಟಿಗಳಿಂದ ಅನುಮತಿ ತೆಗೆದುಕೊಂಡು ಮನೆ ಕಟ್ಟಿದವರನ್ನೂ ತೆರವುಗೊಳಿಸುವಂತಹ ಸ್ಥಿತಿ ಬರುತ್ತದೆಯೇನೋ ಎನ್ನುವಂತಹ ಆತಂಕ ನಮಗೆ ಇದೆ.

ಅಧ್ಯಕ್ಷರು:- ನಿಮಗೇನು ತೊಂದರೆ ಅದರಿಂದ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಸಾಮಾನ್ಯ ಜನ ಏನು ಮನೆ ಕಟ್ಟಿಕೊಂಡಿದ್ದಾರೆ ಅದನ್ನು ಕೀಳುತ್ತಾರೆ.

ಅಧ್ಯಕ್ಷರು:- ಕೀಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಾಳೆ ಮನೆಗಳನ್ನು ಕೀಳುವುದಕ್ಕೆ ಹೋದರೆ, ನಾವು ಅರಣ್ಯದಿಂದ ಏನೇನು ತೊಂದರೆ ಅನುಭವಿಸುತ್ತಿದ್ದೇವೆ. ಅದರ ಕಷ್ಟ ಗೊತ್ತಿದೆ. ನಾಳೆ ಅವರನ್ನೂ ತೆರವುಗೊಳಿಸುವುದಕ್ಕೆ ಹೋದರೆ ಸಮಾನ್ಯ ಜನರ ಕಥೆ ಏನು? ಬೇರೆ ಬೇರೆ ಅಥಾರಿಟಿಯವರು ಪರ್ಮಿಷನ್ ಕೊಟ್ಟಿದ್ದಾರೆ. ಅವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅಂತಹವರ ಬಗ್ಗೆ

ತಿದ್ದುಪಡಿಯೊಂದಿಗೆ ಬಿಲ್ ತರಬೇಕೆಂದು ನಮ್ಮ ಆಶಯ ಅಷ್ಟೆ. ಇಲ್ಲವೆಂದರೆ ಸಾಮಾನ್ಯ ಜನ ಬಹಳ ಕಷ್ಟ ಅನುಭವಿಸಬೇಕಾಗುತ್ತದೆ.

ಶ್ರೀ ಎಂ.ಟಿ.ಬಿ. ನಾಗರಾಜ್:- ಇಷ್ಟು ಜನ ವಿರೋಧ ಮಾಡುವುದು ನೋಡಿದರೆ ಯಾರೋ ದೊಡ್ಡ ದೊಡ್ಡ ಪ್ರಭಾವಿಗಳೇ ಒತ್ತುವರಿ ಮಾಡಿಕೊಂಡ ಹಾಗೆ ಕಾಣುತ್ತಿದೆ.

ಶ್ರೀ ಜಿ.ಟಿ. ದೇವೇಗೌಡ:- ಇದಕ್ಕೆ ಯಾರ ವಿರೋಧವೂ ಇಲ್ಲ. ಅಂಕಿ ಅಂಶ ಕ್ರಮಬದ್ಧವಾಗಿ ತನ್ನಿ ಎಂದು ಅಷ್ಟೆ ಹೇಳುತ್ತಿರುವುದು.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ಆ ಸಮಿತಿ ವರದಿ ಕೊಡುತ್ತಿದೆ. ಆ ವರದಿ ಬಂದ ಮೇಲೆ ಮಾಡಿ ಹೇಗಿದ್ದರೂ ಮುಂದಿನ ತಿಂಗಳು ಬಜೆಟ್ ಅಧಿವೇಶನ ಇದೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ವರದಿ ಬಂದ ಮೇಲೆ ರೂಲ್ಸ್ ಮಾಡೋಣ. ಕಾನೂನು ಪಾಸ್ ಮಾಡುವುದಕ್ಕೆ ಅವಕಾಶ ಮಾಡಿ. ಕಾನೂನೇ ಬೇಡವೆಂದರೆ ಏನರ್ಥ? ಇಡೀ ರಾಜ್ಯಕ್ಕೆ ಕಾನೂನು ಇದೆ, ಪಟ್ಟಣ ಪ್ರದೇಶಗಳಿಗೆ ಮಾತ್ರ ಕಾನೂನು ಬೇಡವಾ? ಕಾನೂನೇ ಬೇಡವೆಂದರೆ ಏನು ಅರ್ಥ?

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ:- ಸರಿಯಾದ ಕಾನೂನು ಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಕಾನೂನು ಇರಲೂ ಬೇಕೆಂದು ಹೇಳುತ್ತಾರೆ, ರಕ್ಷಣೆ ಕೊಡಬೇಕೆಂದೂ ಹೇಳುತ್ತಾರೆ. ಯಾವ ರೀತಿಯಾಗಿ ಅಮೆಂಡ್‌ಮೆಂಟ್ ಪ್ರಪೋಸ್ ಮಾಡುತ್ತಾರೆ ಮಾಡಲಿ ನೋಡೋಣ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ;- ಮಾನ್ಯ ಸಚಿವರೇ ಕಾನೂನಿಗೆ ಯಾರ ವಿರೋಧವೂ ಇಲ್ಲ.

(ಗೊಂದಲ)

ಅಧ್ಯಕ್ಷರು:- ಈಗ ಪಾಸ್ ಮಾಡೋಣ. ರೂಲ್ಸ್ ಮಾಡುವಾಗ ಸರಿಯಾಗಿ ಇಲ್ಲದಿದ್ದರೆ ಏನಾದರೂ ಬದಲಾವಣೆ ಮಾಡುವುದಕ್ಕೆ ಸಲಹೆ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಆ Act ನಲ್ಲಿ ಏನು ಪ್ರಾವಿಷನ್ ಇವೆ, ಅದಕ್ಕೆ ಪೂರಕವಾಗಿ ರೂಲ್ಸ್ ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ರೂಲ್ಸ್ ಮಾಡುವುದಕ್ಕಾಗುವುದಿಲ್ಲ. ಇನ್ನೂ ಬಿಲ್ ಪಾಸ್ ಆಗಿಲ್ಲ. ಎಲ್ಲಾ ಸದಸ್ಯರುಗಳ ಭಾವನೆ ಅರ್ಥ ಮಾಡಿಕೊಳ್ಳಿ, ಬಜೆಟ್ ಅಧಿವೇಶನದಲ್ಲಿ ಪಾಸ್ ಮಾಡಲಿ.

ಶ್ರೀ ಟಿ.ಬಿ. ಜಯಚಂದ್ರ:- This is prospective ಈ Act prospective ಆಗುತ್ತದೆ. ಈ ಹಿಂದೆ ಆಗಿರುವಂಥದ್ದಕ್ಕೆ ಏನೆಂದು ರೂಲ್ಸ್ ನಲ್ಲಿ accommodate ಮಾಡುತ್ತೇವೆ. ಕಾನೂನೇ ಬೇಡವೆಂದು ಹೇಳಿದರೆ ಹೇಗೆ? There is a big gap.

ಶ್ರೀ ಎನ್.ಹೆಚ್. ಕೋನರೆಡ್ಡಿ;- ಮಾನ್ಯ ಕಾನೂನು ಸಚಿವರೇ, ಕಾನೂನು ಯಾರೂ ಬೇಡವೆಂದು ಹೇಳಲಿಲ್ಲ. ಚರ್ಚೆಗೆ ಅವಕಾಶ ಕೊಟ್ಟು ಮಾಡಿ. ಯಾರು ಬೇಡವೆಂದು ಹೇಳುತ್ತಾರೆ?

(ಗೊಂದಲ)

ಅಧ್ಯಕ್ಷರು:- ಮಾನ್ಯ ಸದಸ್ಯರುಗಳು ನೀವೆಲ್ಲ ಹೇಳಿದ್ದರಲ್ಲಿ ಕಾನೂನಿನ ಅಗತ್ಯವಿಲ್ಲವೆಂದು ಯಾರೂ ಹೇಳಲಿಲ್ಲ. ಅಗತ್ಯ ಇದೆ. ಕಾನೂನಿನಿಂದ ಕೆಲವು ಅನಾನುಕೂಲ, ಆದರೆ ಏನು ಪರಿಹಾರ ನಿಡುತ್ತೀರಿ ಎನ್ನುವುದು ಒಂದು. ಆದಕ್ಕೆ ಮಾನ್ಯ ಸಚಿವರು ನಿಯಮಗಳನ್ನು ತರುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್:- ನಿಯಮಗಳನ್ನು ಇಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ನಿಯಮದ ಬಗ್ಗೆ ಚರ್ಚೆ ಮಾಡುವಂತಹ ಅವಕಾಶ ಸದನಕ್ಕೆ ಇಲ್ಲ. ಸನದ ಕಾನೂನು ಮಾತ್ರ ಮಾಡಬಹುದು ಅಷ್ಟೇ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಇವರಿವರ ಕ್ಷೇತ್ರದಲ್ಲಿ ಇರತಕ್ಕಂತಹ ಸಮಸ್ಯೆಗಳು ಅಲ್ಲ, ಇದು ಎಲ್ಲರ ಕ್ಷೇತ್ರಗಳಲ್ಲಿಯೂ ಇರತಕ್ಕಂತಹ ಸಮಸ್ಯೆ, ಇವರಿವರ ಕ್ಷೇತ್ರದಲ್ಲಿ ಇರತಕ್ಕಂತಹ ಸಮಸ್ಯೆಗಳು ಅಲ್ಲ, ಇದು ಎಲ್ಲರ ಕ್ಷೇತ್ರಗಳಲ್ಲಿಯೂ ಇರತಕ್ಕಂತಹ ಸಮಸ್ಯೆ. ನಾನೂ ಕೂಡ ತುಮಕೂರಿನಲ್ಲಿ ಪ್ರತಿನಿತ್ಯ ಇಂತಹ ಸಮಸ್ಯೆ ಎದುರಿಸುತ್ತಿದ್ದೇನೆ. ನಾವು ರೂಲ್ಸ್ ಮಾಡುವಂತಹ ಸಂದರ್ಭದಲ್ಲಿ ಒಂದು consensus ಅಭಿಪ್ರಾಯ ತೆಗೆದುಕೊಂಡು ಮಾಡೋಣ. ಕಾನೂನು ಇಲ್ಲವೆಂದರೆ ಹೇಗೆ ಅಧ್ಯಕ್ಷರೆ,

ಶ್ರೀ ಬಿ.ಆರ್. ಪಾಟೀಲ್:- ಕಾನೂನಿನ ಅಡಿಯಲ್ಲಿಯೇ ರೂಲ್ಸ್‌ಗಳನ್ನು ಮಾಡುವುದು.

ಅಧ್ಯಕ್ಷರು:- ಮಾನ್ಯ ಅಶ್ವಥನಾರಾಯಣ ರವರೇ, ನೀವು ಮಾತನಾಡುವಾಗ ಈ ಕಾನೂನು ಜನರಿಗೆ ವಿರುದ್ಧವಾಗಿದೆ ಎಂದು ಏನಾದರೂ ಹೇಳಿದಿರಾ? ಈ ಪ್ರಾವಿಷನ್ ಹೀಗಿದೆ, ಈ ಪ್ರಾವಿಷನ್ ಹೀಗಿದೆ, ಅನುಕೂಲ ಅನಾನುಕೂಲ ಇದ್ಯಾವುದೂ ವಿಶ್ಲೇಷಣೆ ಹೇಳಲೇ ಇಲ್ಲ. ಮಾನ್ಯ ಸುರೇಶ್ ಕುಮಾರ್‌ರವರು ಕೂಡ ಕಾನೂನನ್ನು ಸ್ವಾಗತ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆ. . .

ಶ್ರೀ ಎಸ್.ಆರ್. ವಿಶ್ವನಾಥ್:- ಕಾನೂನು ಬೇಡವೆಂದು ಹೇಳುತ್ತಿಲ್ಲ. ಇದರಲ್ಲಿ ಕೆಲವು vague ಆಗಿದೆ. Blind ಆಗಿ ಕೊಟ್ಟಿದ್ದಾರೆ.

ಶ್ರೀ ಎಸ್.ಸುರೇಶ್ ಕುಮಾರ್:- At the risk of repetition ಹೇಳುತ್ತೇನೆ. ಇದು ಅಗತ್ಯವಿದೆ. ಅಗತ್ಯವಿರುವಾಗ ಅಗತ್ಯ ಇರುವ ಸಂಗತಿ ಇದರಿಂದ ಆಗಬೇಕು. ನಾನು ಅದಕ್ಕೋಸ್ಕರ ಸರೋವರದ definition ಒತ್ತಿ ಹೇಳಿರುವುದು.

ಅಧ್ಯಕ್ಷರು:- ಹೌದು.

ಶ್ರೀ ಎಸ್.ಸುರೇಶ್ ಕುಮಾರ್:- ಸರೋವರ ಎಂದರೆ, ಅದರಲ್ಲಿ ನೀರು ಇರಲಿ ಅಥವಾ ಇಲ್ಲದಿರಲಿ ಇದು ಬಹಳ ದೊಡ್ಡ ಸಮಸ್ಯೆ. ಅದರಲ್ಲಿ ನೀರು ಇರಲಿ, ಇಲ್ಲದಿರಲಿ, ಕಂದಾಯ ದಾಖಲೆಗಳಲ್ಲಿ ಹೇಳಲಾದ.. ಇದು ಸಮಸ್ಯೆ ಬರುತ್ತಿರುವುದು.

ಶ್ರೀ ಟಿ.ಬಿ. ಜಯಚಂದ್ರ:- ನೀರು ಇಲ್ಲ ಅಂದಾಕ್ಷಣಕ್ಕೆ encroachment ಮಾಡುವುದಕ್ಕೆ ಬಿಟ್ಟು ಬಿಡಬೇಕೆಂದಲ್ಲಾ ಅರ್ಥ?

ಶ್ರೀ ಎಸ್.ಸುರೇಶ್ ಕುಮಾರ್:- encroachment ಅಲ್ಲ, ಈಗ ಏನೂ ಮಾಡುವುದಕ್ಕಾಗುವುದಿಲ್ಲ ನೀವು.

ಶ್ರೀ ಟಿ.ಬಿ. ಜಯಚಂದ್ರ:- ಕೆರೆಗಳನ್ನು ರಕ್ಷಣೆ ಮಾಡಬೇಕಾದಾಗ ನೀರು ಇರಲಿ, ಇಲ್ಲದಿರಲಿ ರಕ್ಷಣೆ ಮಾಡಬೇಕಾಗುತ್ತದೆ. ತಾವು definition ನಲ್ಲಿ ಏನಾದರೂ ಅವರಿಗೆ protection ಕೊಟ್ಟರೆ ನಾಳೆ ಖಾಲಿ ಇರತಕ್ಕಂತಹ ಯಾವ ಕೆರೆಗಳನ್ನೂ ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಕಾನೂನು ಇದ್ದರೂ ಸಹಿತ ಮಾಡುವುದಕ್ಕಾಗುವುದಿಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಿ. ರೂಲ್ಸ್ ಮಾಡುತ್ತೇವೆ. ರೂಲ್ಸ್ ಮಾಡುವ ಸಂದರ್ಭದಲ್ಲಿ ನೋಟಿಫಿಕೇಷನ್ ಮಾಡುತ್ತೇವೆ. ಆಗ objections ಬರುತ್ತವೆ. ಜನಗಳಿಗೆ ಗೊತ್ತಾಗುತ್ತದೆ.

ಶ್ರೀ ಬಿ. ರಮಾನಾಥ ರೈ:- ನಗರ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಕೆರೆಗಳು ಉಳಿಯುವುದಿಲ್ಲ. ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಪರಿಸ್ಥಿತಿ ಈಗಾಗಲೇ ಕೈ ಮೀರಿ ಹೋಗಿದೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಈ ಕಾನೂನು ಕೆರೆಗಳನ್ನು ಉಳಿಸುವ ದೃಷ್ಟಿಯಿಂದ ತಂದಿರುವುದರಿಂದ ಖಂಡಿತವಾಗಿ ನಾವು ಈ ಕಾನೂನಿನ ಅಗತ್ಯ ಅನಿವಾರ್ಯತೆಯನ್ನು ಅರ್ಥ ಮಾಡಿಕೊಂಡಿದ್ದೇವೆ. ಈ ಕಾನೂನನ್ನು ನಾವು ಕೂಡ ಖಂಡಿತವಾಗಿ ಸ್ವಾಗತ ಮಾಡುತ್ತೇವೆ. ಆದರೆ ಪ್ರಶ್ನೆ ಇಲ್ಲಿ ಎರಡು ಇದೆ. ಒಂದು ಸರೋವರದ ಡೆಫನಿಷನ್ ಇನ್ನೊಂದು ಸೆಕ್ಷನ್ 49. ಇವೆರಡನ್ನೂ ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೇವೆ. ಒಂದು ನೀವು ಕೆರೆಗಳನ್ನು ತೆಗೆದುಕೊಂಡು definition ಕೊಟ್ಟಿದ್ದು, ಕೆರೆಗಳನ್ನು

ಉಳಿಸಬೇಕೆನ್ನುವ ಕಾರಣಕ್ಕಾಗಿ ಈ ಕಾಯಿದೆ ತರುತ್ತಿದ್ದೀರಿ. ಆಯಿತು. ಈಗ ಇದರ ಪ್ರಕಾರ ಕೆರೆಗಳನ್ನು ಉಳಿಸುತ್ತೇವೆಂದು ಹೊರಟಿದ್ದೀರಿ. ಈಗ ಆ ಸರೋವರ ಕೆರೆಯಲ್ಲಿ ನೀರು ಇರಲಿ ಇಲ್ಲದೆ ಇರಲಿ, ಯಾವುದೋ ನುಂಗಣ್ಣ ನುಂಗಿ ಹಾಕಿದ್ದಾನೆಂದು ಹೇಳುತ್ತೀರಿ. ಇದುವರೆಗೆ ನುಂಗಿರುವವರಿಂದ ಆ ಕೆರೆಗಳನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಏನು ಮಾಡುತ್ತೀರಿ ಎಂದು ಇದೆಯಾ ಅದರಲ್ಲಿ? ಇದರಲ್ಲಿ ಅದಕ್ಕೆ ಏನಾದರೂ ಕ್ರಮ ಇದೆಯಾ? ಶಿಕ್ಷೆ ಇದೆಯಾ?

ಶ್ರೀ ಬಿ. ರಮಾನಾಥ ರೈ:– ಸರಿಯಾಗಿ ಓದಿದರೆ ಎಲ್ಲಾ ಇದೆ.

ಶ್ರೀ ವೈ.ಎಸ್.ವಿ. ದತ್ತಾ:– ಮನವರಿಕೆ ಮಾಡಿ ಕೊಡಿ. ಅದಕ್ಕಿಂತ ಹೆಚ್ಚಿಗೆ ನಮಗೆ ಆತಂಕ ಏನು ಕಾಡುತ್ತಿದೆ ಎಂದರೆ, ಆ ಸೆಕ್ಷನ್ 49 ಮುಂದಿನ ದಿನಗಳಲ್ಲಿ ದುರುಪಯೋಗ ಆಗುವ ಸಾಧ್ಯತೆ ಇದೆ. ಈ ಕಾನೂನು ಜಾರಿಗೆ ಬರುತ್ತದೆ ಎಂದಿಟ್ಟುಕೊಳ್ಳೋಣ, ವಾದಕ್ಕೆ ಹೇಳೋಣ. ಈ ಕಾನೂನನ್ನು ತರುತ್ತೀರಿ. ಯಾವುದೋ ಒಂದು ಕೆರೆ ನಿಮ್ಮ definition ಪ್ರಕಾರ ಎಲ್ಲೋ ಒತ್ತುವರಿ ಮಾಡಿಕೊಂಡಿರುತ್ತಾರೆ, ಅದರೊಳಗೆ ಇವರು ಹೋಗುತ್ತಾರೆ, ಹೋದಾಗ ಇದನ್ನು ತೆರವುಗೊಳಿಸಬೇಕೆಂತಲೋ, ಮತ್ತೊಂದು ಮಾಡಬೇಕೆಂತಲೋ ಹೋಗುತ್ತಾರೆ. ಅಲ್ಲಿಗೆ ಹೋದಾಗ ಅಲ್ಲಿ ಯಾವನಾದರೂ ಪಟ್ಟಭದ್ರಹಿತಾಸಕ್ತಿಯಿದ್ದರೆ, ಅಲ್ಲಿ ಯಾರೋ ಬಡವರು ಮನೆ ಕಟ್ಟಿಕೊಂಡಿದ್ದರೆ, ಆಶ್ರಯ ಮನೆಗಳನ್ನು ಕಟ್ಟಿದ್ದರೆ ಅಂಥವುಗಳನ್ನು ಬಿಡಿ, ಆದರೆ ಅಲ್ಲಿ ಪಟ್ಟಭದ್ರಹಿತಾಸಕ್ತರು ಅಪಾರ್ಟ್‌ಮೆಂಟ್ ಕಟ್ಟಿಕೊಂಡಿದ್ದರೆ, ಆಸ್ಪತ್ರೆಗಳನ್ನು ಕಟ್ಟಿದ್ದರೆ, ಕಾಲೇಜುಗಳನ್ನು ಕಟ್ಟಿಕೊಂಡಿದ್ದರೆ, ಆಗ ಅಂಥವರುಗಳು ಕಟ್ಟಿರುವುದನ್ನು ನೀವು ಕೆಡವಿಸಬೇಕಲ್ಲ? ಆಗ ಅವರು ಏನು ಮಾಡುತ್ತಾರೆಂದರೆ ಸೆಕ್ಷನ್ 49 ಗೆ ಹೋಗುತ್ತಾರೆ.

ಅಧ್ಯಕ್ಷರು:– ಆ ರೀತಿ ಹೇಗೆ ಹೇಳುತ್ತೀರಿ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಸಭಾಧ್ಯಕ್ಷರೆ, ಈ ರೀತಿಯಾಗುತ್ತದೆ. ಮತ್ತೆ ಅಕ್ರಮಗಳನ್ನು ಸಕ್ರಮ ಮಾಡುವುದಕ್ಕಾಗಿಯೇ ನಾವು ವಿಧೇಯಕವನ್ನು ಇಲ್ಲಿ ತಂದಿಲ್ಲವೆ,

ಅಧ್ಯಕ್ಷರು:- ಅದಕ್ಕಾಗಿ ನಿಮ್ಮ ಸಲಹೆಯೇನು?

ಶ್ರೀ ವೈ.ಎಸ್.ವಿ. ದತ್ತಾ:- ಅದಕ್ಕಾಗಿಯೇ ನಾನು ಹೇಳುತ್ತಿರುವುದು, ಇದರೊಳಗಡೆಯಲ್ಲಿ ಈ ಸರೋವರದ definition ಬಗ್ಗೆ ಸ್ಪಷ್ಟವಾಗಬೇಕು.

ಅಧ್ಯಕ್ಷರು:- ಸ್ಪಷ್ಟವೆಂದರೆ ಏನು?

ಶ್ರೀ ವೈ.ಎಸ್.ವಿ. ದತ್ತಾ:- ಸ್ಪಷ್ಟ ಎಂದರೆ ಈಗಾಗಲೇ ಹಾಲಿ ಯಾವ ಯಾವ ಕೆರೆಗಳು ಸರ್ಕಾರದ ಕಂದಾಯ ಇಲಾಖೆ ಎಂಥಲ್ಲ, ಅದಕ್ಕೊಂದು base ಇದೆ, ಎಷ್ಟು ಕೆರೆಗಳು ಎನ್ನುವುದಕ್ಕೆ ನಮ್ಮ ಹತ್ತಿರ 1985 ರಲ್ಲಿ Gazette Notifiction ಆಗಿರುವುದರಲ್ಲಿದೆ. ಆ ಕೆರೆಗಳ ಬಗ್ಗೆ Government Order ಆಗಿ Gazette Notification ಆಗಿದೆ. ಅದನ್ನು base ಆಗಿ ಇಟ್ಟುಕೊಂಡು ಆ ಕೆರೆಗಳನ್ನು ನೀವು ತೆಗೆದುಕೊಂಡರೆ definition ಗಾಗಿ ಆ ಕೆರೆಗಳದ್ದು ಒಂದು ರೀತಿಯಾದ್ದಾಗುತ್ತದೆ. ಎರಡನೆಯದಾಗಿ, ನೀವು ಇದರೊಳಗೆ ನಮ್ಮ ಸದನಕ್ಕೆ ಸ್ಪಷ್ಟವಾಗಿ ಮನವರಿಕೆ ಮಾಡಿಕೊಡಿ, ಆ ಕೆರೆಗಳನ್ನು ನೀವು ಕಾಯಿದೆ ಪ್ರಕಾರ ತೆರವುಗೊಳಿಸುವುದಕ್ಕೆ ಹೋದಾಗ ಅಲ್ಲಿ ಯಾರು ಯಾರು ಒತ್ತುವರಿ ಮಾಡಿದ್ದಾರೆ ಅಂಥವುಗಳನ್ನು ಹೇಗೆ ತೆರವುಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ನಮಗೆ ಮನವರಿಕೆ ಮಾಡಿಕೊಡಿ. ಆಮೇಲೆ ನಾವು ಇದನ್ನು ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು:- ಈ ಕಾನೂನು ಜಾರಿಗೆ ತರುವಂಥ ಸಂದರ್ಭದಲ್ಲಿ ಯಾವ ಯಾವ ಕೆರೆಗಳು ಅಸ್ತಿತ್ವದಲ್ಲಿವೆ ಎನ್ನುವ ಬಗ್ಗೆ ಹೇಳಬೇಕು ಎನ್ನುತ್ತಿದ್ದೀರಿ. ಅಲ್ಲವೇನ್ರಿ?

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಸಭಾಧ್ಯಕ್ಷರೆ, ಯಾವ ಯಾವ ಕೆರೆಗಳು ಅಸ್ತಿತ್ವದಲ್ಲಿವೆ ಎನ್ನುವ ಪದವನ್ನು ಹಾಕಿಬಿಟ್ಟರೆ ಆಗ ಆ ಕೆರೆಗಳಲ್ಲಿ ಆಗಿರುವ ಒತ್ತುವರಿಯನ್ನು ಬಿಡಿಸುವುದಕ್ಕೆ ಆಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ದಯಮಾಡಿ ನಿಯಮ 15, 16 ಅನ್ನು ಓದಿರಿ.

ಅಧ್ಯಕ್ಷರು:- ನೀವು ಅದನ್ನೂ ಹೇಳುತ್ತೀರಿ, ಇದನ್ನೂ ಹೇಳುತ್ತೀರಿ. ಹೇಗೆ?

ಶ್ರೀ ಕೆ.ಬಿ. ಕೋಳಿವಾಡ್:- ಮಾನ್ಯ ಅಧ್ಯಕ್ಷರೆ,

ಶ್ರೀ ವೈ.ಎಸ್.ವಿ. ದತ್ತಾ:- ಅದಕ್ಕೋಸ್ಕರ ನಾನು ಹೇಳುವುದೇನೆಂದರೆ,

ಅಧ್ಯಕ್ಷರು:- ದತ್ತಾರವರೆ, ಕೋಳಿವಾಡ್ ಏನೋ ಹೇಳುತ್ತಾರಂತೆ, ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಅದಕ್ಕಿಂತ ಮುಂಚೆ ನಾನು ಹೇಳಿಬಿಡುತ್ತೇನೆ. ನಿಯಮ 15, 16 ನೋಡಿದರೆ, ಸರೋವರಗಳ ರಕ್ಷಣೆ, ಒತ್ತುವರಿಯಾದದ್ದನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರಾವಿಶನ್ ಇದೆ.

ಅಧ್ಯಕ್ಷರು:- ಮಾನ್ಯ ಕಾನೂನು ಸಚಿವರೆ, ಈಗ ದತ್ತಾರವರು ಏನು ಹೇಳಿದರೆಂದರೆ, ಯಾವುದೋ ಒಂದು ಕೆರೆಯಪ್ಪಾ, ಅದರಲ್ಲಿ ಈಗಾಗಲೇ ಒಂದು ಆಸ್ಪತ್ರೆ ಬಂದುಬಿಟ್ಟಿದೆ, ಒಂದು ಲೇಔಟ್ ಬಂದುಬಿಟ್ಟಿದೆ, ನೀವು ಕೇಳುವುದಕ್ಕೆ ಹೋದಕೂಡಲೇ ಒಳ್ಳೆಯ ಗಿರಾಕಿ ಸಿಕ್ಕುತ್ತಾವಲ್ಲ, ಅಲ್ಲವೇನ್ರಿ?

ಶ್ರೀ ವೈ.ಎಸ್.ವಿ. ದತ್ತಾ:- ಹೌದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಹುಬ್ಬಳ್ಳಿಯಲ್ಲಿ ಐ.ಟಿ. ಪಾರ್ಕ್ ಇದೆ, HDMC Complex ಇದೆ. ಹುಬ್ಬಳ್ಳಿಯಲ್ಲಿ ತಿರುಕಾಮ್ಮನೂರ ಕೆರೆ ಎಂದು ಇತ್ತು. ಅದು ಹೋಗಿ ಅಲ್ಲಿ ಸರ್ಕಾರದ್ದೇ ಒಂದು IT Park ಬಂದಿದೆ, ಆಮೇಲೆ ದೊಡ್ಡ HDMC Complex ಬಂದಿದೆ. ಈ ವ್ಯವಸ್ಥೆಯೊಳಗೆ ಅದನ್ನೆಲ್ಲಾ ಕಟ್ಟಿಸಿ ಈಗಾಗಲೇ 30 ವರ್ಷವಾಗಿದೆ. ಈಗ ಇದರ ಪ್ರಕಾರ ಅವುಗಳನ್ನು demolish ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ಸ್ವಲ್ಪ ಎಲ್ಲರೂ ಸುಮ್ಮನಿರಿ. ಸ್ವಲ್ಪ ಅನುಭವವನ್ನು ಪಡೆದಿರುವ ಮಾನ್ಯ ಕೋಳಿವಾಡ್‌ರವರು ಮಾತನಾಡುತ್ತಾರೆ. ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಕೆ.ಬಿ. ಕೋಳಿವಾಡ್:- ಮಾನ್ಯ ಅಧ್ಯಕ್ಷರೆ, ನಾನು ಈ ಕೆರೆಗಳ ಒತ್ತುವರಿಯ ಬಗ್ಗೆ ರಚನೆಯಾಗಿರು ಸದನ ಸಮಿತಿಯ ಅಧ್ಯಕ್ಷನಾಗಿರುವುದರಿಂದ ಅದರ ಬಗ್ಗೆ ನಾನು ವಿವರವಾಗಿ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಕಾನೂನು ಏನು ಹೇಳುತ್ತದೆ ಎನ್ನುವ ಬಗ್ಗೆ ಒಂದೆರಡು ನಿಮಿಷ ಹೇಳಬಯಸುತ್ತೇನೆ. ಕಾನೂನು ಅತ್ಯಂತ ಸ್ವಾಗತಾರ್ಹವಾಗಿರತಕ್ಕಂಥದ್ದು. ಇದರಲ್ಲಿ existence ನಲ್ಲಿರತಕ್ಕಂತಹ ಕೆರೆ ಮತ್ತು existence ನಲ್ಲಿ ಇಲ್ಲದೇ ಇರತಕ್ಕಂಥ ಕೆರೆ, ಈ ಎರಡೂ ರೀತಿಯ ಕೆರೆಗಳಿವೆ. ಇರಲಿ, ತಪ್ಪೇನಿಲ್ಲ. Non-existence ನಲ್ಲಿ ನೀರು ಇರುವುದಿಲ್ಲ, ಅದು ಬರೇ ಭೂಮಿಯಾಗಿರುತ್ತದೆ, ಅಲ್ಲಿ encroachment ಆಗಿದ್ದರೆ ಅದನ್ನು remove ಮಾಡಬಹುದು, ಅಲ್ಲಿ difficult ಆಗುವುದಿಲ್ಲ. ಆದರೆ ಒಂದು difficulty ನನಗೆ ಕಂಡುಬರುತಕ್ಕಂಥದ್ದೇನೆಂದರೆ totday, we are going to pass the Act. ಆಮೇಲೆ Section 49, Removal of Dıfficulty ಇದೆಯಲ್ಲಾ ಇದರೊಳಗೆ ಏನು ಹೇಳಲಾಗಿದೆಯೆಂದರೆ not inconsistent with the provisions of this Act, we can remove the difficulties ಎಂದು ಹೇಳಲಾಗಿದೆ. Suppose, ಈಗಾಗಲೇ, ಬಿ.ಡಿ.ಎ. ಲೇಔಟ್ ಮಾಡಿ ನಿವೇಶನಗಳನ್ನು, ಮನೆಗಳನ್ನು ಕೊಟ್ಟುಬಿಟ್ಟಿದೆ. ಬಿ.ಬಿ.ಎಂ.ಪಿ. ಯವರು encroach ಮಾಡಿ ಅನೇಕ ಆಫಿಸ್‌ಗಳನ್ನು ಮಾಡಿಬಿಟ್ಟಿದ್ದಾರೆ. If we pass the Act now, ಮಾಡಬಾರದೆಂದು ಹೇಳುತ್ತಿಲ್ಲ, ಮಾಡೋಣ, ಆದರೆ the word, not inconsistent with the provisions of this Act, ಎಂದು ಇದೆಯಲ್ಲಾ today, we are going to pass this Act. In this Act, we have to remove all, which have been encroached ಎನ್ನತಕ್ಕಂಥದ್ದು ಆಗುತ್ತದೆ. ಅದಕ್ಕೆ not inconsistent with the provisions of this Act, ಎನ್ನುವುದನ್ನು

ತೆಗೆದುಹಾಕಿದರೆ better ಆಗುತ್ತದೇನೋ. ಅಂದರೆ ಈಗಾಗಲೇ ಏನು Government ನ, ಬಿ.ಡಿ.ಎ. ದವರಾಗಲಿ; ಬಿ.ಬಿ.ಎಂ.ಪಿ. ಯವರಾಗಲಿ ಅಲ್ಲಿ encroach ಮಾಡಿ ಕಛೇರಿಗಳನ್ನು ಕಟ್ಟಿಬಿಟ್ಟಿರುತ್ತಾರೋ ಅವುಗಳನ್ನು ಉಳಿಸಿ, ಪ್ರೈವೇಟ್‌ನವರಾಗಲಿ ಅಥವಾ ಬೇರೆ ಯಾರೇ ಆಗಲಿ, ಏಜೆನ್ಸಿಗಳವರಾಗಲಿ encroach ಮಾಡಿದ್ದರೆ ಅವುಗಳನ್ನು remove ಮಾಡುವುದಕ್ಕೆ ಅನುಕೂಲವಾಗುತ್ತದೆ. ಎನ್ನತಕ್ಕಂಥ ನನ್ನ ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀ ಜಿ.ಎಸ್. ಪಾಟೀಲ್:- Government ನವರು ಕೆರೆ ಒತ್ತುವರಿ ಮಾಡಿದರೆ ನಡೆಯುತ್ತದೆಯೇ?

ಶ್ರೀ ಕೆ.ಬಿ. ಕೋಳಿವಾಡ್:- ಉದಾಹರಣೆಗೆ ಹೇಳಬೇಕೆಂದರೆ 1604 ಕೆರೆಗಳು Government Order ಪ್ರಕಾರ ಈಗ ಇವೆ. ಸುಮಾರು 400 ಕೆರೆಗಳು not in existence ಎಂದು ಇವೆ. Not in existence ಎಂದರೆ ಅಲ್ಲಿ ನೀರು ಇರುವುದಿಲ್ಲ. ಅದನ್ನು encroach ಮಾಡಬಹುದು ಎಂದರ್ಥವಲ್ಲ. ಅದನ್ನು encroach ಮಾಡಬಾರದು. ಈಗ ಅಂಥದ್ದು ಕೂಡ ಕೆಲವು ಕಡೆ ಒತ್ತುವರಿಯಾಗಿದೆ, ಇಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಅದಕ್ಕಾಗಿ ಅಂಥ ಒತ್ತುವರಿಯನ್ನು remove ಮಾಡುವುದು ಬಹಳ ಅವಶ್ಯಕತೆಯಿದೆ. ಅದಕ್ಕೆ ಕಾನೂನಿನ ಅವಶ್ಯಕತೆಯೂ ಇದೆ. ಆದರೆ Section 49 ರಲ್ಲಿ Removal of difficulty ಮಾಡತಕ್ಕಂಥದ್ದೇನಿದೆಯಲ್ಲ ಅಲ್ಲಿ ಇರತಕ್ಕಂಥ clause ನೊಳಗೆ notwithstanding anything contained in the provisions of this Act, today we are passing the Act. Therefore, we must remove all the encroachments, but it will be subject to the review of the Judiciary ಎಂದು ಆಗುತ್ತದೆ. ಏಕೆ ತೆಗೆಯುವುದಕ್ಕೆ ಹೇಳುತ್ತಾನೆಂದರೆ, subject to the review of the Judiciary, ಆ ಕಾರಣದ ಬಗ್ಗೆ ಕಾನೂನು ಸಚಿವರು ಸ್ವಲ್ಪ ಗಮನ ಹರಿಸಬೇಕು ಎನ್ನತಕ್ಕಂಥದ್ದು ನನ್ನ ಸಲಹೆ.

ಅಧ್ಯಕ್ಷರು:- ಕಾನೂನು ಸಚಿವರೆ, ಹೇಳ್ರಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ದಯಮಾಡಿ ನಾವು ಕೆರೆಗಳ ಬಗ್ಗೆ ಈಗ basically,

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಜಯಚಂದ್ರರವರೆ, ಒಂದು ನಿಮಿಷ, ನೋಡಿ ಮಾನ್ಯ ಅಧ್ಯಕ್ಷರೆ, ನಾನು ಆಗಿನಿಂದಲೂ ನೋಡುತ್ತಿದ್ದೇನೆ, ಇವರು ಎರಡು ಕ್ಯಾಟಗರಿ ಮಾಡುತ್ತಿದ್ದಾರೆ, Existing tank, non-existing tank. ಇವರು ಹೇಳುವ ಪ್ರಕಾರ non-existing tank ಎಂದರೆ ನೀರು ಇಲ್ಲದೇ ಇರುವುದು, ಮಳೆ ಬರಲಿಲ್ಲ, ನೀರಿಲ್ಲ, ಅಲ್ಲಿಗೆ non-existent? There are some tanks, which have lost the character of tank.

ಅಧ್ಯಕ್ಷರು:– Non-existent ಎಂದರೆ ಅದು,

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಅದಕ್ಕೆ bund ಇಲ್ಲ. Waste weir ಇಲ್ಲ. Feeder channel ಇಲ್ಲ. ಅಚ್ಚುಕಟ್ಟು ಕೂಡ ಇಲ್ಲ, ಎಷ್ಟೋ ವರ್ಷಗಳಾಗಿಹೋಗಿದೆ, ಅದು ಟೌನ್‌ಗೆ, ಸಿಟಿಗೆ ಮಧ್ಯದಲ್ಲೋ ಹೊಂದಿಕೊಂಡಿದ್ದರೆ ಬುದ್ಧಿವಂತರು ಅದನ್ನು gradually encroach ಮಾಡುತ್ತಾ ಹೋಗುತ್ತಾರೆ. ಆಮೇಲೆ ಅದಕ್ಕೆ ಬೇಕಾಗಿರುವ documents ಸೃಷ್ಟಿ ಮಾಡಿಕೊಳ್ಳುತ್ತಾರೆ. ಇಲ್ಲಿಂದ ಹೊಸಕೋಟೆ ಎಷ್ಟು ದೂರ ಇದೆ ಹೇಳಿ, ಇಲ್ಲಿಂದ ಕೇವಲ 20 ಕಿ.ಮೀ., ಅಲ್ಲಿ main road ನಲ್ಲಿ ಹೊಸಕೋಟೆ ಟೋಲ್ ಏನಿದೆ ಅಲ್ಲಿ left ಗೆ ಒಂದು apartment ಇದೆ. ನಾವು ಸಣ್ಣ ಹುಡುಗರಾಗಿದ್ದಾಗಿನಿಂದಲೂ ಬರಬೇಕಾದರೆ ಅದೇ ರಸ್ತೆಯಲ್ಲಿಯೇ ಬರಬೇಕು, ಅದೇ ರಸ್ತೆಯಲ್ಲಿಯೇ ಹೋಗಬೇಕು. ಅದೆಲ್ಲಾ ಕೆರೆಯ ಭಾಗವೇ ಆಗಿದೆ.

ಶ್ರೀ ಎಂ.ಟಿ.ಬಿ. ನಾಗರಾಜ್:– ಮಾನ್ಯ ಅಧ್ಯಕ್ಷರೆ, ಕೆರೆಯ ಜಾಗ ಅಲ್ಲಿ ಒಂದು ಗುಂಟೆ ಕೂಡ ಒತ್ತುವರಿಯಾಗಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಬಹಳ ಸಂತೋಷ. ಆಯಿತಪ್ಪಾ ಅಲ್ಲಿಯ ಎಂ.ಎಲ್.ಎ. ನಾನಲ್ಲ. ನನಗೆ ಗೊತ್ತಿಲ್ಲಪ್ಪಾ. ನಾನು ಕೆರೆ

ಎಂದುಕೊಂಡಿದ್ದೆ. ನಾನು ಅಲ್ಲಿಯ ಎಂ.ಎಲ್.ಎ. ಕೂಡ ಅಲ್ಲ. ನಾನು ಸರ್ವೇ ನಂಬರ್‌ಗಳನ್ನು ಇಟ್ಟುಕೊಂಡಿರುವುದಿಲ್ಲ. ಆದುದರಿಂದ ನನಗೆ ಗೊತ್ತಿಲ್ಲ. ಆದರೆ general ಆಗಿ ನಾನು ಹೇಳುತ್ತೇನೆಂದೆ, ಕೆಲವು ಕಡೆ ಆ ಜಾಗ ಖಾಲಿ ಬಿದ್ದುಬಿಟ್ಟಾಗ ಇವರಲ್ಲಿ ಈಗಾಗಲೇ ಒಂದು ರೂಲ್ ಇದೆ. ಸರ್ಕಾರ ಮಾಡಿರತಕ್ಕಂಥ ಕಾನೂನಿನಲ್ಲಿ ಒಂದು ಅವಕಾಶವಿದೆ. ಸಚಿವ ಸಂಪುಟದಲ್ಲಿ ಅದನ್ನು irrigation list ನಿಂದ ತೆಗೆಯಬೇಕು, M.I. Tanks list ನಿಂದ delete ಮಾಡಬೇಕು. ಅದನ್ನು ಇವರು ಮಾಡಬೇಕಾಗಿದ್ದರೆ ಎಲ್ಲ ಕಡೆ ಇಂಜಿನಿಯರ್‌ಗಳು ಹೋಗಿ inspection ಮಾಡಿ, Pollution Control Board ನವರು report ಕೊಟ್ಟು, ಇವೆಲ್ಲಾ ಮಾಡಿ ಇದು ಕೆರೆಯ ಸ್ವರೂಪವನ್ನು ಕಳೆದುಕೊಂಡುಬಿಟ್ಟಿದೆ, ಇದು ಕೆರೆ ಎಂದು ಕರೆಯುವುದಕ್ಕೆ ಯೋಗ್ಯವಲ್ಲವೆಂದು ಹೇಳಿ ಅದನ್ನು Tanks list ನಿಂದ delete ಮಾಡಿದ ಮೇಲೆ ಅದನ್ನು ರೆವಿನ್ಯುಗೆ hand over ಮಾಡುತ್ತಾರೆ. ನೀವು ಸರ್ಕಾರದ್ದು ಒಂದು ವೇಳೆ ಇದ್ದರೆ ಅದನ್ನು ಸರ್ಕಾರಿ ಒತ್ತುವರಿ ಎಂದು ಕರೆಯಬೇಡಿ, ಸಾರ್ವಜನಿಕ ಕೆಲಸಗಳಿಗಾಗಿ ಸರ್ಕಾರವೇ ಯಾವುದಾದರೂ ಕಟ್ಟಡ ಕಟ್ಟಿರುತ್ತಾರೆ. ಈಗ ನೀವು ಹೇಳಿದಿರಿ, ಒಂದು ಐ.ಟಿ. ಪಾರ್ಕ್ ಎಂದು ಹೇಳಿದಿರಿ, ಅಂಥದ್ದು ಆಗಿದ್ದರೆ ಅಂಥದ್ದಕ್ಕೆ procedure adopt ಮಾಡಿಕೊಳ್ಳಿ, ಆದರೆ ಸರ್ಕಾರ ಮಾಡಿದೆ ಎಂದು ಹೇಳಿ ಒಂದು ಶೀಲ್ಡ್ ಇಟ್ಟುಕೊಂಡು ಎಲ್ಲಾ ಸರ್ಕಾರದ ಜಮೀನಿನಲ್ಲಿ ದೊಡ್ಡ ದೊಡ್ಡವರೆಲ್ಲಾ ಬಹಳ ಜಾಣತನದಿಂದ ಎಲ್ಲಾ ಕಾಲಕ್ಕೂ ಮಾಡಿಕೊಂಡು ಬಂದು ಎಲ್ಲವನ್ನು ಕಬಳಿಸಿಕೊಂಡುಬಿಟ್ಟಿದ್ದಾರಲ್ಲ, ಅದನ್ನು ಹಿಡಿಯುವುದಕ್ಕೆ ಏನು ಮಾಡುತ್ತೀರಿ ಹೇಳಿ. ಈಗ ಇರುವ losses are enough.

ಅಧ್ಯಕ್ಷರು:- ಅವರು ಈಗ ಪ್ರಾವಿಶನ್ ಮಾಡಿದ್ದಾರಲ್ಲ ಅದು acceptable ಆಗಿದೆಯೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಈಗ ಹಾಲಿ ಇರುವುದೇ ಸಾಕಲ್ಲವೆ, ನಾನು ಏನು ಹೇಳುತ್ತೇನೆಂದರೆ, ಈಗಿರತಕ್ಕಂಥ ಕಾನೂನಿನಲ್ಲಿ ಸರ್ಕಾರಿ ಜಾಗದಲ್ಲಿ ಕೆರೆ ಎಂದು ಇದ್ದರೆ ಅದರಲ್ಲಿ ಅವನು ಮನೆ ಕಟ್ಟಿಕೊಂಡಿದ್ದರೆ,

ಅಪಾರ್ಟ್‌ಮೆಂಟ್ ಕಟ್ಟಿದ್ದರೆ ಅಥವಾ ಇನ್ನೇನಾದರೂ ಮಾಡಿದ್ದರೆ ಅದನ್ನು ತೆರವುಗೊಳಿಸುವುದಕ್ಕೆ ನಿಮಗೇನಾದರೂ ಕಷ್ಟವಿದೆಯೇ?

ಅಧ್ಯಕ್ಷರು:– ಏನೂ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಏಕೆ ಮಾಡುವುದಿಲ್ಲ?

ಅಧ್ಯಕ್ಷರು:– ಮನಸ್ಸಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಏಕೆ ಮಾಡುವುದಿಲ್ಲ? ಕಾನೂನು ಯಾವಾಗ ಮಾಡುತ್ತೇವೆಂದರೆ ಇರುವ ಕಾನೂನು ಅಸಮರ್ಪಕವಾಗಿದ್ದಾಗ ಅಥವಾ ಒಂದು ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ, ನಿಯಂತ್ರಿಸುವುದಕ್ಕೆ ಕಾನೂನು ಇಲ್ಲದಿದ್ದಾಗ ಹೊಸ ಕಾನೂನಿನ ಆಲೋಚನೆಯನ್ನು ಮಾಡುತ್ತೇವೆ. ನಾವು ಕಾನೂನನ್ನು ಖುಷಿಗೆ ಮಾಡುತ್ತೇವಾ? ನಮಗೆ ನೀವು ಮನವರಿಕೆ ಮಾಡಬೇಕಾಗಿರುವುದು ಈಗ ಹಾಲಿ ಅಸ್ತಿತ್ವದಲ್ಲಿ ಇರುವಂತಹ ಶಾಸನಗಳು ಸಮರ್ಪಕವಾಗಿ ಇದೆಯೇ ಇಲ್ಲವೇ? ಯಾವ ಶಾಸನ ಅಸಮರ್ಪಕವಾಗಿ ಇರುವುದರಿಂದ, ಕೊರತೆಯಿರುವುದರಿಂದ ಅದನ್ನು ಸದೃಢ ಮಾಡುವುದಕ್ಕೆ ಈ ಶಾಸನವನ್ನು ತರುತ್ತಿದ್ದೇವೆ ಎಂದು ಮನವರಿಕೆ ಮಾಡಿದರೆ ನಾವು ತಲೆಬಾಗುತ್ತೇವೆ. ಸುಮ್ಮನೆ ಗಂಟೆಗಟ್ಟಲೆ ಚರ್ಚೆ ಮಾಡುತ್ತಿದ್ದೇವೆ. ತಾವು ಎಲ್ಲರಿಗೆ, ಏಕೆ ಬಿಲ್ introduce ಮಾಡಿದಾಗ ಚರ್ಚೆ ಮಾಡಲಿಲ್ಲ, ನಾನು ಬಿಲ್ ಪಾಸ್ ಮಾಡುವ ವೇಳೆಗೆ ಪ್ರಶ್ನೆ ಕೇಳುತ್ತಿದ್ದೀರಲ್ಲ, Is this is the way to debate a bill ಎಂದು ಒಂದು ಮಾತು ಹೇಳಿದಿರಿ. You are right sir, ತಾವು House ನ custodian ಆಗಿ ಆ ಸ್ಥಾನದಲ್ಲಿ ಕುಳಿತು ನಮಗೆಲ್ಲ ಗೈಡ್ ಮಾಡಬೇಕಾಗಿರುವುದು, that is the right question. The entire House should. . . . ನಾನು ಮಾನ್ಯ ಕಾನೂನು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, not with the Forest Minister. Because, Law making is your portfolio. Are the laws in existence have become inadequate, ineffective, incompetent to deal with the present crisis? If that is so, please list out, give us, show, ನಮ್ಮ experience ಹೀಗಿದೆ,

ಇದಕ್ಕೆ ಇಂತಹ ತೊಂದರೆ ಇದೆ, ಇದನ್ನು overcome ಮಾಡುವುದಕ್ಕೆ ಮಾಡುತ್ತಿದ್ದೇವೆ ಎಂದು ಹೇಳಿ. Then, I think the entire House will agree with him. ಏನು ಕುಮಾರ ಸ್ವಾಮಿಯವರೆ, ಏನಾದರೂ ತಕರಾರು ಇದೆಯೇ? ಈಗ ಇರುವಂತಹ ಕಾನೂನಿನಲ್ಲಿ ಏನಾದರೂ ತೊಂದರೆಯಿದ್ದರೆ ತನ್ನಿ. ಆದರೆ ನಾವು ಒಂದನ್ನು ಆತ್ಮವಂಚನೆಯಿಲ್ಲದ ಒಪ್ಪಿಕೊಳ್ಳಬೇಕು. ಆ ಪಾರ್ಟಿ, ಈ ಪಾರ್ಟಿ, ಆ ಸರ್ಕಾರ, ಈ ಸರ್ಕಾರ ಎಂದಲ್ಲ. ಎಲ್ಲೋ ಒಂದು ಕಡೆ convenient ಆಗಿ ನಮ್ಮೆಲ್ಲರಿಗೂ ಕೂಡ ಇದು ಕಾಣಿಸಿದಾಗ ನಿದ್ದೆ ಬರುತ್ತದೆ ಅಥವಾ ಕಣ್ಣು ಮುಚ್ಚಿಕೊಳ್ಳುತ್ತೇವೆ. ಇಂತಹವರೆಲ್ಲ ಪರೋಕ್ಷವಾಗಿ ನಮ್ಮ ಸುತ್ತ ಇರುತ್ತಾರೆ. ಅವರೆಲ್ಲಾದರೂ ದೂರವಿದ್ದರೆ ಹುಡುಕಿ ಹಿಡಿದುಕೊಡಬಹುದು. ಎಲ್ಲಾ ವಿಧಾನಸೌಧದ ಸುತ್ತಲೆ ಇದ್ದಾರೆ, ನಮ್ಮ ಮಂತ್ರಿಗಳ ಮನೆಗಳ ಸುತ್ತಲೇ ಇದ್ದಾರೆ. ಯಾವ ಕಾಲಕ್ಕೆ ಯಾರು ಮಂತ್ರಿಯಾಗಿದ್ದರು ಅವರ ಮನೆಯ ಹತ್ತಿರ ಇರುತ್ತಾರೆ, ಈ ಮಂತ್ರಿ, ಆ ಮಂತ್ರಿ ಅಂತಲ್ಲ. ಇವರೇನು ಹೊಸದಾಗಿ ನಿನ್ನೆ ಮೊನ್ನೆ ಹುಟ್ಟಿದವರಲ್ಲ. ಇವರು ಎಲ್ಲಾ ಕಾಲಕ್ಕೂ ಇದ್ದಾರೆ. ನಾವು ಏನಪ್ಪಾ ಎಂದರೆ ನಮ್ಮದು ದ್ವಿಪಾತ್ರ ಅಭಿನಯ. ಅಲ್ಲಿದ್ದಾಗ ಒಂದು ಧ್ವನಿ, ಇಲ್ಲಿದ್ದಾಗ ಒಂದು ಧ್ವನಿ. ಇಲ್ಲಿದ್ದಾಗ ರಕ್ಷಣೆ ಮಾಡುವ ಧ್ವನಿ, ಅಲ್ಲಿದ್ದಾಗ ಕೂಗಾಡುವ ಧ್ವನಿ. ಮತ್ತೆ ಸಾಯಂಕಾಲ ನಾವಿಬ್ಬರೂ ಒಂದೇ. This should not happen. You want to deal with them, come on specify, spell out the reaons. Come out with the conflict law, we are all with you. You want to sit till midnight. ಇವತ್ತೇ ತರುತ್ತೀರಾ? Come back, we are prepared to sit. You can't do this way. This is not . . .

ಅಧ್ಯಕ್ಷರು:- ಈಗ by and large ನಮ್ಮ total House ನ conscious ಅಂದರೆ ಈ ಮಸೂದೆ ಬಗ್ಗೆ ಯಾರದು ವಿರೋಧ ಇಲ್ಲ. ಒಂದೇ ಒಂದು ಉದ್ದೇಶ ಎಂದರೆ ಸರೋವರ ಎನ್ನುವ ಒಂದು definition plus Section ಇವೆರಡೇ ವಿಚಾರದಲ್ಲಿ ಈ controversy ಅನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ಹೇಳಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, non existent tank, lake ಎಂದರೆ whether it has retained the characteristic features of a tank and has failed to hold water or has it completely loss the character of a tank ಅದನ್ನು ಮಾತನಾಡಬೇಕು. That is very important.

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ:- ಮಾನ್ಯ ರಮೇಶ್ ಕುಮಾರ್ ರವರು ಹೇಳಿದ ಹಾಗೆ ಈಗ ಕಾನೂನು ಇಲ್ಲವೇ ಎಂದರೆ ಕಂದಾಯ ಆಕ್ಟ್‌ನಲ್ಲಿ ಇದೆ. Revenue Act ನಲ್ಲಿ not only tanks, ಎಲ್ಲಾ ಒತ್ತುವರಿಗಳನ್ನು remove ಮಾಡುವುದಕ್ಕೆ provisions ಇದೆ. ಅದು proper ಆಗಿ ಇಲ್ಲಿಯವರೆಗೂ implement ಆಗಿಲ್ಲವೆನ್ನುವ ದೃಷ್ಟಿಯಿಂದ ಈ ಕೆರೆಗಳನ್ನು ಸಂರಕ್ಷಣೆ ಮಾಡಬೇಕು ಎನ್ನತಕ್ಕಂಥ ವಿಶೇಷವಾದಂತಹ ಒಂದು Lake Development Authority ಏನಿದೆ, removal ಅಧಿಕಾರವನ್ನು ಅದಕ್ಕೆ ಕೊಡಬೇಕು ಎನ್ನುವಂತಹ ದೃಷ್ಟಿಯಿಂದ ಈ ಕಾನೂನು ತಂದಿರುವುದು. ಇದು ಬಹಳ ಅವಶ್ಯಕತೆ ಇದೆ. ಅದರ difficulties ಏನಿದೆ ಎನ್ನುವುದನ್ನು ಚರ್ಚೆ ಮಾಡೋಣ. ಕಾನೂನು ತಂದಿರುವುದು ಅತ್ಯಂತ ಸ್ವಾಗತಾರ್ಹವಾದುದು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಕೋಳಿವಾಡರವರೇ, you are an advocate, I admire that. The incompetence of a system to enforce the implementation of a law should it lead to the formulation of another law? If there is no law, I agree with you. If there is a law, and you failed to enforce that law.

ಶ್ರೀ ಕೆ.ಬಿ. ಕೋಳಿವಾಡ:- ಮಾನ್ಯ ರಮೇಶ್ ಕುಮಾರ್ ರವರ ಪ್ರಕಾರ inefficiency of implementation of the Government ಅಲ್ಲ. ನಾನು ಹೇಳುತ್ತಿರುವುದು with this scope ಇದೆ, removal of encroachments, ಅದು ಯಾವುದೇ ಇರಲಿ, ಇಡೀ ರಾಜ್ಯದ ತುಂಬಾ ಇದೆ. ವಿಶೇಷವಾಗಿ ಕೆರೆಗಳಿಗೆ ಏಕೆ ಹೆಚ್ಚು ಒತ್ತು ಕೊಡುತ್ತಿದ್ದೆವೆ ಎಂದರೆ ಜಲ ಸಂರಕ್ಷಣೆಯನ್ನು

ಮಾಡಬೇಕು, ಅಂತರ್ಜಲ ಮೇಲೆ ಬರಬೇಕು, ಕೆರೆಗಳೆಲ್ಲಾ ನೀರು ತುಂಬಬೇಕು. ಅದಕ್ಕೆ ಅಡೆತಡೆ ಇರುವಂತಹ ರಾಜಕಾಲುವೆಗಳು ಏನು encroachment ಆಗಿವೆ, ಅವುಗಳನ್ನು remove ಮಾಡಬೇಕು. ವಿಶೇಷವಾಗಿ ಜಲ ಸಂರಕ್ಷಣೆ ಸಲುವಾಗಿ, ಈ ಕೆರೆಳ ರಕ್ಷಣೆ ಸಲುವಾಗಿ ನಾವು ಸರ್ಕಾರದರು ಈ ಕಾನೂನನ್ನು ತೆಗೆದುಕೊಂಡು ಬಂದಿದ್ದೇವೆ. ಈ ಕಾನೂನು ಅತ್ಯಂತ ಸ್ವಾಗತಾರ್ಹವಾದುದಾಗಿದೆ. Some difficulties ಇದೆ. Section 49 ನಲ್ಲಿ subject not withstanding anything contained in the provision ಎಂದು ಏನಿದೆ, ಅದು ನನಗೆ ಸ್ವಲ್ಪ doubt ಬರುತ್ತಿದೆ. ಒಮ್ಮೆ ಈ ಕಾನೂನು ಮಾಡಿಬಿಡುತ್ತೇವೆ. ನಾಳೆ ಏನಾದರೂ ಮಾಡುವುದಕ್ಕೆ ಹೋದರೆ subject to review of the judiciary.

ಅಧ್ಯಕ್ಷರು:- ಈಗ ನಿಮ್ಮ contention ಈ Act ಬಗ್ಗೆ ಸ್ವಾಗತ ಇದೆ. Only ಸರೋವರ ಮತ್ತು ಸೆಕ್ಷನ್ 49 ಬಗ್ಗೆ doubt ಇದೆಯೇ?

ಶ್ರೀ ಕೆ.ಬಿ. ಕೋಳಿವಾಡ:- ಸರೋವರ definition correct ಇದೆ. Only Section 49 ಏನಿದೆ, ಇವತ್ತು ಕಾನೂನು ಮಾಡಿಬಿಡುತ್ತೇವೆ. Not withstanding anything contained in the Act ಎಂದು ಇದೆ. ಈಗ ನಾವು ಏನು ಮಾಡಿದ್ದೇವೆಂದರೆ ಬಿಡಿಎ ದಿಂದ encroach ಮಾಡಿ layout ಮಾಡಿ ಕೊಟ್ಟುಬಿಟ್ಟಿದ್ದೇವೆ. ಆಗ we have to remove that. If we do not remove, court will interfere and say it must be removed.

ಶ್ರೀ ಜಿ.ಟಿ. ದೇವೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಇರುವಂತಹ ಕಾನೂನಿನಲ್ಲಿ ಯಾವುದು implement ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಎಂದು ಹೇಳಿದರು, ಅದನ್ನು ಹೇಳಲಿ.

ಶ್ರೀ ಕೆ.ಬಿ. ಕೋಳಿವಾಡ:- ಇರುವ ಕಾನೂನು ಕಂದಾಯ ಆಕ್ಟ್‌ನಲ್ಲಿದೆ. ಅದರಲ್ಲಿರುವುದೇ ಇಲ್ಲಿಯವರೆಗೂ implement ಆಗಿಲ್ಲ.

ಶ್ರೀ ಜಿ.ಟಿ. ದೇವೇಗೌಡ:- ಅದು ಹೇಗೆ ಮಾಡುವುದಕ್ಕೆ ಬರುತ್ತದೆ? ಏನು ತೊಂದರೆ ಎನ್ನುವುದನ್ನು ಹೇಳಲಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಮಾನ್ಯ ಅಧ್ಯಕ್ಷರೆ, ನಗರ ವ್ಯಾಪ್ತಿಯಿಂದ ಹೊರಗಡೆ ಕೆರೆಗಳ ಸಂರಕ್ಷಣೆಗಾಗಿ ಒಂದು ವಿಧೇಯಕವನ್ನು ಇಲ್ಲಿ ಚರ್ಚೆ ಮಾಡಿ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಆಮೇಲೆ ನಗರ ವ್ಯಾಪ್ತಿಯಲ್ಲಿರುವಂತಹ ಕೆರೆಗಳ ಸಂರಕ್ಷಣೆ ದೃಷ್ಟಿಯಿಂದ ನಾವು ವಿಧೇಯಕವನ್ನು . . . .

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಅಧ್ಯಕ್ಷರೆ, ಅವರು ನಾವು ಹೇಳುವುದನ್ನು ಕೇಳುತ್ತಲೇ ಇಲ್ಲ. ಮಾನ್ಯ ಅಧ್ಯಕ್ಷರು ಹೇಳುತ್ತಿದ್ದಾರೆ, ಸೌಜನ್ಯಕ್ಕಾಗಿ ಒಂದು ನಿಮಿಷ ಕೇಳಿ. ಉಪಯುಕ್ತ ಕೆರೆಗಳು ಮತ್ತು ನಿರುಪಯುಕ್ತ ಕೆರೆಗಳು ಎಂದು definition ಕೊಟ್ಟಿದ್ದಾರೆ. ಉಪಯುಕ್ತ ಕೆರೆಗಳು ಎಂದರೆ ನೀರು ಇರುವಂತಹ ಕೆರೆಗಳು ಎನ್ನುವುದು ಒಂದು ಅಂಶ. ನೀರು ಬರದಿರುವಂತಹ ಕೆರೆಗಳು ನಿರುಪಯುಕ್ತ ಕೆರೆಗಳು ಎಂದು ಹೇಳುತ್ತಾರೆ. ನಿರುಪಯುಕ್ತ ಕೆರೆ ಎಂದರೆ ಅದರ ಅರ್ಥ ನೀರು ಕೆರೆಗೆ ಬರದಿರುವುದು ಮಳೆ ಬರದಿರುವುದಕ್ಕೆ ಅಲ್ಲ. ಅನೇಕ ಪ್ರದೇಶದಲ್ಲಿ ಮಳೆಯಾಗುತ್ತದೆ, ಆ ಮಳೆ ನೀರು ಆ ಟ್ಯಾಂಕಿಗೆ ಬರುತ್ತದೆ. ನೀರು ಆ ಹಳ್ಳದ ಮುಖಾಂತರ, ಕಾಲುವೆ ಮುಖಾಂತರ ಏನು ಬರುತ್ತದೆ, ನಮ್ಮ ಉತಾರದಲ್ಲಿ ಖರಾಬು ಜಮೀನು ಎಂದು ಇದ್ದು, real estate ನವರು ಏನು ಮಾಡುತ್ತಿದ್ದಾರೆಂದರೆ ಖರಾಬು ಜಮೀನನ್ನು ತೆಗೆದು land conversion ಮಾಡಿ ಅಲ್ಲಿ ಮನೆಗಳನ್ನು ಕಟ್ಟುವಾಗ ಕಾಲುವೆಗಳನ್ನು ಬಂದ್ ಮಾಡುವುದರಿಂದ ನೀರು ಬರದಿರುವುದರಿಂದ ಕೆರೆ ನಿರುಪಯುಕ್ತ ಆಗುತ್ತದೆ. ಅದರ ಬಗ್ಗೆ ಇಲ್ಲಿ ಏನೂ ಹೇಳುತ್ತಿಲ್ಲ. ಅದನ್ನು ಹೇಳುವಂಥಾದ್ದಾಗಬೇಕು.

ಶ್ರೀ ಜಿ.ಟಿ. ದೇವೇಗೌಡ:- ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ಹೇಳುವುದಿಷ್ಟೆ, ಈಗ ಇರುವಂತಹ ಕಾನೂನನ್ನು ಏನು ತಿದ್ದುಪಡಿ ಮಾಡುತ್ತಿದ್ದಾರೆ, ಈಗ ಇರತಕ್ಕಂಥ. . .

ಅಧ್ಯಕ್ಷರು:- ತಿದ್ದುಪಡಿ ಅಲ್ಲ, ಹೊಸ ಕಾನೂನು ಮಾಡುತ್ತಿರುವುದು.

ಶ್ರೀ ಜಿ.ಟಿ. ದೇವೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್ ರವರು, ಈಗ ಇರುವಂತಹ ಕಾನೂನು ಪ್ರಕಾರ ಏಕೆ ಮಾಡುವುದಕ್ಕೆ ಆಗುತ್ತಿಲ್ಲ. ಅದರ ಬಗ್ಗೆ ಸಭೆಗೆ ವಿವರವಾಗಿ ಹೇಳಿ ಎಂದು ಏನು ಹೇಳಿದರು, ಆ ಪ್ರಕಾರ ಅವರು ಸದಸ್ಯರಿಗೆ ಒಪ್ಪಿಸಲಿ, ಮನದಟ್ಟು ಮಾಡಲಿ. ಇರುವಂತಹ ಕಾನೂನಿನಲ್ಲಿ ಏಕೆ ಮಾಡುವುದಕ್ಕೆ ಆಗುವುದಿಲ್ಲ. ಏನು ತೊಂದರೆ ಇದೆ ಎನ್ನುವುದನ್ನು ಸದನಕ್ಕೆ brief ಮಾಡಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಕೆರೆಗಳು ತಮ್ಮ ಕೆರೆ ಲಕ್ಷಣವನ್ನು ಕಳೆದುಕೊಂಡಿರುವುದು, ನೀರು ತುಂಬಿಕೊಳ್ಳದಿರುವುದು ಹಾಗೂ ಒತ್ತುವರಿ ಆಗುವುದಕ್ಕೆ ರಾಜಕಾಲುವೆಗಳನ್ನು ಅಡ್ಡಗಟ್ಟಿರುವುದು ಕಾರಣವಾಗಿದೆ. ಬೇಕಾದಷ್ಟು ರಾಜಕಾಲುವೆಗಳನ್ನು ಅಲ್ಲಲ್ಲಿ ಭೂಗಳ್ಳರು ಒತ್ತುವರಿ ಮಾಡಿ ಆ ಕೆರೆಗಳಿಗೆ ನೀರು ಬಂದಿರುವಂತಹ ವ್ಯವಸ್ಥೆಯನ್ನು ಮಾಡಿಕೊಂಡು ಬಂದಿರುವುದರಿಂದ ಅಲ್ಲಿ ಕಾಲುವೆಗಳು ಇಲ್ಲ, ಹಾಗಾಗಿ ಒಂದೊಂದು ದಿವಸ ಒಂದೊಂದು extension ಗೆ ಹೋಗಿ ನೀರು ನುಗ್ಗಿತು ಎಂದು ಹೇಳಿ ಟಿ.ವಿ. ಯವರು ಹಿಡಿದು ತೋರಿಸುತ್ತಾರಲ್ಲ, ಏಕೆ ಎಂದರೆ ಕೆರೆಗೆ ಹೋಗು ನೀರೆಲ್ಲ ಅವರು ಅಡ್ಡ ಕಟ್ಟಿ ಎಲ್ಲೋ ಒಂದು ಕಡೆ ತಳ್ಳುತ್ತಾರೆ, ಅದೇನಾಗುತ್ತದೆ ಎಂದರೆ ಮನೆಯ extensions ಗೆ ಬಂದು ನುಗ್ಗುತ್ತದೆ. ಅದಕ್ಕೋಸ್ಕರ ಇಲ್ಲಿ ಕಾನೂನು ಸರಿಯಿದೆ. ಕಾನೂನಿನ ಬಗ್ಗೆ ಏನೂ ತೊಂದರೆಯಿಲ್ಲ. ಆದರೆ ನಮ್ಮ ಸಚಿವರು ಆತುರ ಪಡುತ್ತಿದ್ದಾರೆ. ಸ್ವಲ್ಪ ನಿಲ್ಲಿ, ಇಲ್ಲಿ ಕೆಲವೊಂದು ಸೇರಿಸಬೇಕು. ಈಗ ಮತ್ತೆ ಭ್ರಷ್ಟಾಚಾರಕ್ಕೆ ನಾಂದಿ ಮಾಡುತ್ತಿದ್ದೀರಿ. ಈಗ ಸರ್ಕಾರಿ ಕೆರೆಗಳು ಯಾವುವು? ಸರ್ಕಾರದ ಉಪಯೋಗಕ್ಕೋಸ್ಕರ ಮತ್ತು ಸಾರ್ವಜನಿಕ ಉಯೋಗಕ್ಕೋಸ್ಕರ ಉಪಯೋಗಿಸಿಕೊಂಡಿರುವ ಕೆರೆಗಳು ಯಾವುದು ಎಂದು ನಿರ್ದಿಷ್ಟವಾಗಿ ಕಾನೂನಿನಲ್ಲಿ ಹೇಳಿ. ಯಾವ ಕೆರೆಗಳನ್ನು ಒತ್ತುವರಿ ಮಾಡಿದ್ದಾರೆಂದು ಸರ್ಕಾರಕ್ಕೆ ಗೊತ್ತಿಲ್ಲವೇ? ಅದರ ಹೆಸರುಗಳನ್ನು ಹೇಳಿ. ಇಂತಿಂತಹ ಕೆರೆಗಳು ಒತ್ತುವರಿಯಾಗಿವೆ, ಈ ಕೆರೆಗಳನ್ನು ನಾವು ಬಿಡಿಸತಕ್ಕಂಥ ಉದ್ದೇಶ ಮತ್ತು ಯಾವುದೇ ಕಾರಣಕ್ಕೂ ಆ ಕೆರೆಗಳನ್ನು

ಬಿಡಿಸಿದ ನಂತರ ಯಾರು ಒತ್ತುವರಿ ಮಾಡಿದ್ದಾರೆ, ಯಾರು flats ಕಟ್ಟಿಕೊಂಡಿದ್ದಾರೆ, ಅವರನ್ನು ಏನು ಮಾಡುತ್ತೀರೆಂದು ಕಾನೂನಿನಲ್ಲಿ ನಿರ್ದಿಷ್ಟವಾದ ಮಾನದಂಡಗಳನ್ನು ಇಟ್ಟುಕೊಂಡು ಹೇಳಿ. ಇಂಥಾದ್ದೇ ಕಾನೂನಿನಡಿಯಲ್ಲಿ ಅವರನ್ನು ಸದೆಬಡಿಯುತ್ತೇನೆ, ಅಂಥ ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತೇನೆ ಎಂದು ಈ ವಿಧೇಯಕದಲ್ಲಿ ಹೇಳಿ. ನೀವು ಮಾಡುವ ನಿಯಮಗಳ ಬಗ್ಗೆ ನಮಗೆ ನಂಬಿಕೆಯಿಲ್ಲ. ಈಗ ಬಂದಂಥ ಬಹಳಷ್ಟು ಜನರು ಸುಮ್ಮಸುಮ್ಮನೆ ಯಾವ್ಯಾವುದಕ್ಕೋ ಸಿಕ್ಕಿಹಾಕಿಕೊಂಡು ಎಂಥೆಂಥಾದ್ದನ್ನೋ ಮಾಡುವುದನ್ನು ಈಗ ನೋಡುತ್ತಿದ್ದೇವಲ್ಲ. ಹಾಗೆ ಆಗಿಬಿಡುತ್ತದೇನೋ ಎಂದು ಅನಿಸುತ್ತದೆ. ನಿಯಮಗಳನ್ನು ರಚನೆ ಮಾಡುವಾಗ ಎಲ್ಲವನ್ನೂ ನಿಮಗೆ for ಆಗಿಯೇ ಮಾಡಿಕೊಳ್ಳಬಹುದು, ನಮಗೇನು ಗೊತ್ತು? ನಿಯಮಗಳನ್ನು ನೀವು ಅಸೆಂಬ್ಲಿಯ ಮುಂದೆ ತೆಗೆದುಕೊಂಡು ಬರುತ್ತೀರಾ? ನಿಯಮಗಳನ್ನು ನಾವು ಹುಡುಕಿಕೊಂಡು ಬರಬೇಕೇ? ಏನು ನಿಯಮಗಳನ್ನು ಮಾಡುತ್ತೀರಿ, ಏನೇನು ತರುತ್ತೀರಿ ಅದೆಲ್ಲವನ್ನೂ ವಿವರವಾಗಿ ತನ್ನಿ. ಬೆಂಗಳೂರಿಗೆ ಸಂಬಂಧಿಸಿದಂತೆ ಇದೊಂದು ಪ್ರಮುಖವಾಗಿರುವಂಥ ವಿಚಾರ. ಕೆರೆ ಒತ್ತುವರಿಯ ಬಗ್ಗೆ ಒಂದು ಸದನ ಸಮಿತಿಯನ್ನು ರಚನೆ ಮಾಡಿದ್ದೀರಿ. ಒಂದು ಕಡೆ ಸದನ ಸಮಿತಿ ನಡೆಯುತ್ತಿದೆ. ಸಾವಿರಾರು ಎಕರೆ ಕೆರೆಗಳ ಅಂಗಳವನ್ನು ಒತ್ತುವರಿ ಮಾಡಿದ್ದೀರಿ ಎನ್ನುವುದನ್ನು ಜಗಜ್ಜಾಹೀರು ಮಾಡಿದ್ದೀರಿ. ಆದರೆ ಅದನ್ನು ಸ್ವಾಧೀನಪಡಿಸಿಕೊಳ್ಳುವಂಥ ನಿಟ್ಟಿನಲ್ಲಿ ಏನು ಮಾಡುತ್ತೀರಿ ಮತ್ತು ಅದನ್ನು ಸಕ್ರಮ ಮಾಡುತ್ತೀರೋ, ಇಲ್ಲವೆಂದರೆ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವವರಿಗೆ ಏನು ಶಿಕ್ಷೆ ಕೊಡುತ್ತೀರಿ ಎನ್ನುವುದ್ಯಾವುದನ್ನೂ ಇದರಲ್ಲಿ ನಿರ್ದಿಷ್ಟವಾಗಿ ಹೇಳಿಲ್ಲ. ಆಮೇಲೆ ನಿಯಮಗಳನ್ನು ರಚನೆ ಮಾಡಿಕೊಂಡು ನಾವು ಅವರಿಗೆ ರಿಯಾಯಿತಿ ಕೊಡುತ್ತೇವೆ ಎಂದರೆ ಯಾವುದಕ್ಕೆ ಕೊಡುತ್ತೀರಿ, ಹೇಗೆ ಕೊಡುತ್ತೀರಿ? ಒತ್ತುವರಿ ಮಾಡಿಕೊಂಡಿರುವಂಥ ಅಕ್ರಮ ಮನೆಗಳನ್ನು ಈಗ ಸಕ್ರಮ ಮಾಡುತ್ತಿದ್ದೀರಿ? ಈ ರೀತಿಯ ಕಾನೂನನ್ನೇನಾದರೂ ತರುತ್ತೀರಾ? ಯಾವ ರೀತಿ

ಕಾನೂನನ್ನು ತರುತ್ತೀರಿ ಎಂದು ಸ್ಪಷ್ಟವಾಗಿ ಹೇಳಿ. ರಮೇಶ್ ಕುಮಾರ್‌ರವರು ಹೇಳಿರುವುದು ಸರಿಯಿದೆ.

ಶ್ರೀ ಬಿ. ರಮಾನಾಥ ರೈ:- ಈ ಕಾನೂನನ್ನು ಉಲ್ಲಂಘನೆ ಮಾಡಿದವರಿಗೆ ಏನೇನು ಮಾಡುತ್ತೇವೆ ಎನ್ನುವುದೆಲ್ಲ ವಿವರವಾಗಿ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಇಲ್ಲ, ಅದರಲ್ಲಿ ಅಂಥ ಸ್ಪಷ್ಟವಾಗಿ ಏನೂ ಇಲ್ಲ.

ಶ್ರೀ ಬಿ. ರಮಾನಾಥ ರೈ:- ಅದರಲ್ಲಿ ಸ್ಪಷ್ಟವಾಗಿಯೇ ಇದೆ.

ಶ್ರೀ ವೈ.ಎಸ್.ವಿ. ದತ್ತಾ:- ಸನ್ಮಾನ್ಯ ಸಭಾಧ್ಯಕ್ಷರೆ, ಈ ಕಾನೂನನ್ನು ನಾವು ಸ್ವಾಗತ ಮಾಡೋಣ, ಬೆಂಬಲವನ್ನೂ ಕೊಡೋಣ ಎಂದೇ ಇಟ್ಟುಕೊಳ್ಳೋಣ. ಆದರೆ ಇದು ಎಷ್ಟು ಜಾಳುಜಾಳಾಗಿದೆ ಎಂದರೆ, ಒತ್ತುವರಿ ತೆರವು ಮಾಡುವಂಥಾದ್ದಕ್ಕೆ ಇದರಲ್ಲಿ ಹೆಚ್ಚು ಒತ್ತು ಇಲ್ಲ. Section 15 ಮತ್ತು Section 16 ಅನ್ನು ಗಮನಿಸಿ. Section 15 ಏನು ಹೇಳುತ್ತದೆ ಎಂದರೆ, ಕೆರೆಗಳನ್ನು ಯಾರಾದರೂ ಒತ್ತುವರಿ ಮಾಡಿಕೊಂಡಿದ್ದರೆ ಅದನ್ನು ತೆರವುಗೊಳಿಸುವುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಯು ಸೂಕ್ಷ್ಮವಾಗಿ ನಿರ್ದೇಶನ ನೀಡಬಹುದು ಎಂದು ಬಹಳ vague ಆಗಿ ಹೇಳುತ್ತದೆ.

ಶ್ರೀ ಬಿ. ರಮಾನಾಥ ರೈ:- ನಿಖರವಾಗಿಯೇ ಇದೆ. ನಿಮ್ಮಷ್ಟಕ್ಕೆ ನೀವು ಭಾವಿಸಿಕೊಂಡು ಮೇಲ್ನೋಟಕ್ಕೆ ಮಾತನಾಡಿದರೆ ನಾನು ಏನೆಂದು ಉತ್ತರ ಕೊಡಲಿ?

ಶ್ರೀ ವೈ.ಎಸ್.ವಿ. ದತ್ತಾ:- ನನಗೆ ಅನ್ನಿಸಿದ್ದನ್ನು ನಾನು ಹೇಳುತ್ತೇನೆ. Section 16 ರಲ್ಲಿ ಏನಿದೆ ಎಂದರೆ, ಯಾರಾದರೂ ಕೆರೆಗಳಲ್ಲಿ ಮೀನು ಹಿಡಿಯುವುದಕ್ಕೆ ಹೋದರೆ, ದೋಣಿ ತೆಗೆದುಕೊಂಡು ಹೋದರೆ, ಮೋಟಾರು ಹಾಕುವುದಕ್ಕೆ ಹೋದರೆ ಅಂಥವರ ವಸ್ತುಗಳನ್ನು, ಸಾಮಗ್ರಿಗಳನ್ನು, ದೋಣಿಗಳನ್ನು, ವಾಹನಗಳನ್ನು, ಬಲೆಗಳನ್ನು ಜಪ್ತಿ ಮಾಡಿಕೊಳ್ಳಬಹುದು ಎಂದು ಇದೆ. ಅಂದರೆ, Section 16 ರ ಪ್ರಕಾರ ಜೀವಂತವಿರುವ ಕೆರೆಗಳನ್ನು ಯಾರಾದರೂ ದುರ್ಬಳಕೆ ಮಾಡಿಕೊಳ್ಳುವುದಕ್ಕೆ

ಹೋದರೆ ಅವರಿಗೆ ಏನು ದಂಡ ಹಾಕಬೇಕು, ಯಾವ ಅಧಿಕಾರಿ ಕೇಸ್ ಹಾಕಬೇಕು ಎಂದು ಜೀವಂತವಿರುವ ಕೆರೆಗಳ ಬಗ್ಗೆ ಹೇಳುತ್ತದೆ. ಆದರೆ ಇಲ್ಲಿ ನಾವು ಪ್ರಶ್ನೆ ಮಾಡುತ್ತಿರುವುದು, ನಿರುಪಯುಕ್ತವಾದ, ನೀರಿಲ್ಲದ ಕೆರೆಗಳ ಬಗ್ಗೆ, ನಿರುಪಯುಕ್ತವಾದ ನೀರಿಲ್ಲದ ಕೆರೆಗಳು ಎಂದು ನೀವು definition ನಲ್ಲಿ ಕೊಟ್ಟಮೇಲೆ ಅವುಗಳನ್ನು ಒತ್ತುವರಿ ಮಾಡಿಕೊಂಡವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಈ ಕಾಯಿದೆಯಲ್ಲಿ ಸ್ಪಷ್ಟವಾದಂತಹ ಮಾಹಿತಿಯಿಲ್ಲ. Section 15 ಸ್ಪಷ್ಟವಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಬಿ. ರಮಾನಾಥ ರೈ:– ಈ ವಿಧೇಯಕದಲ್ಲಿ ಕಾನೂನಿನ ಎಲ್ಲ ಅವಕಾಶಗಳು ಇವೆ. ಅದನ್ನು ಇನ್ನೂ ಬಲಗೊಳಿಸಬೇಕು ಎನ್ನುವುದು ಇದೆ.

ಶ್ರೀ ಟಿ.ಬಿ. ಜಯಚಂದ್ರ:– ಕಾನೂನು ತರಬೇಕಾದಂಥ ಸಂದರ್ಭದಲ್ಲಿ. . . .

(ಈ ಹಂತದಲ್ಲಿ ಸದಸ್ಯರಾದ ಶ್ರೀ ಎಂ.ಟಿ. ಕೃಷ್ಣಪ್ಪನವರು ಮಾತನಾಡಲು ಪ್ರಯತ್ನಿಸಿದರು)

ಅಧ್ಯಕ್ಷರು:– ಆವತ್ತು ಚರ್ಚೆ ಮಾಡುವ ಕಾಲದಲ್ಲಿ ಯಾರೂ ನಿಂತುಕೊಳ್ಳಲಿಲ್ಲ.

ಶ್ರೀ ಜಿ.ಟಿ. ದೇವೇಗೌಡ:– ಮಾನ್ಯ ಅಧ್ಯಕ್ಷರೆ, ಇದನ್ನು ಈಗ ಮಂಡಿಸಿದ್ದಾರೆ, ಚರ್ಚೆ ಮಾಡಲಿಲ್ಲ ಅಂದರೇನು?

ಅಧ್ಯಕ್ಷರು:– ಗೌಡರೇ, ನೀವು ಹೇಳಿದ್ದೀರಿ, ಈಗ ನೀವು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಕೆ. ಗೋಪಾಲಯ್ಯ:– ಇವತ್ತು ಬೆಂಗಳೂರು ಮಹಾನಗರದಲ್ಲಿ, ...

ಅಧ್ಯಕ್ಷರು:– ಒಂದು ನಿಮಿಷ ತಾಳಿ. ನೀವು ಆವತ್ತು ಏಕೆ ಮಾತನಾಡಲಿಲ್ಲ? ಬಿಲ್‌ಅನ್ನು ಚರ್ಚೆಗೆ ತೆಗೆದುಕೊಂಡಾಗ ಏಕೆ ಮಾತನಾಡಲಿಲ್ಲ? ಆಗ ನಾನು ಕೇಳಲಿಲ್ಲವೇ?

ಶ್ರೀ ಕೆ. ಗೋಪಾಲಯ್ಯ:- ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವಂಥ ಕೆರೆಗಳಲ್ಲಿ ಹಲವಾರು ಕೆರೆಗಳು ಒತ್ತುವರಿಯಾಗಿವೆ. ಅಲ್ಲಿ ಅಪಾರ್ಟ್‌ಮೆಂಟ್‌ಗಳಾಗಿವೆ, ಸರ್ಕಾರಿ ಕಟ್ಟಡಗಳು ಬಂದಿವೆ. ಬಿ.ಡಿ.ಎ. ನವರು ನೂರಾರು ಎಕರೆಯಲ್ಲಿ ಸೈಟುಗಳನ್ನು ಮಾಡಿ ಕೊಟ್ಟಿದ್ದಾರೆ. ಅದಕ್ಕೆ ಮಹಾನಗರಪಾಲಿಕೆ ಮತ್ತು ಬಿ.ಡಿ.ಎ. ನಿಂದ ಪ್ಲಾನ್ ಅಪ್ರೂವಲ್ ಆಗಿ ಲೋನ್ ತೆಗೆದುಕೊಂಡು ಮನೆಗಳನ್ನು ಕಟ್ಟಿದ್ದಾರೆ. ಇನ್ನೊಂದು ಕಡೆ ಮಹಾನಗರ ಪಾಲಿಕೆ ವತಿಯಿಂದ ಹಕ್ಕುಪತ್ರಗಳನ್ನು ಕೊಡುವಂಥ ಕೆಲಸವನ್ನು ಮಾಡಿದ್ದು, ಅವರೂ ಸಹ ಲೋನ್‌ಅನ್ನು ತೆಗೆದುಕೊಂಡಿದ್ದಾರೆ. ನಮ್ಮ ಸುತ್ತಮುತ್ತ ಇರುವಂಥ ಅನೇಕ ಕೆರೆಗಳು ಪ್ಲೇ ಗ್ರೌಂಡ್‌ಗಳಾಗಿವೆ, ಒಳ್ಳೊಳ್ಳೆಯ ಪಾರ್ಕ್‌ಗಳಾಗಿವೆ. ಸುಮಾರು 5-10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮಾಡಿರುವಂಥ ದೊಡ್ಡದೊಡ್ಡ ಪಾರ್ಕ್‌ಗಳಿವೆ. ಅವುಗಳನ್ನೆಲ್ಲ ಏನು ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಅನೇಕ ಕಡೆ ಬಹಳಷ್ಟು ಬಡವರು ವಾಸ ಮಾಡುತ್ತಿರುವ ಕಡೆಗಳಿಗೂ ಹಕ್ಕುಪತ್ರಗಳನ್ನು ಕೊಟ್ಟಿದ್ದೇವೆ. ಅವರಿಗೂ ಸಹ ಲೋನ್‌ಗಳನ್ನು ಕೊಟ್ಟಿದ್ದಾರೆ. ಅವುಗಳನ್ನೆಲ್ಲ ಏನು ಮಾಡಬೇಕು ಎಂದು ಹೇಳಬೇಕು. ಹಾಗಾಗಿ ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಬೇಕು. ಜೊತೆಗೆ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದೊಡ್ಡದೊಡ್ಡ ತಿಮಿಂಗಲಗಳು ಎಕರೆಗಟ್ಟಳೆ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಅಲ್ಲಿ ಅಪಾರ್ಟ್‌ಮೆಂಟ್ ಕಟ್ಟಿರತಕ್ಕಂಥಾದ್ದು ಇದೆ. ಅದಕ್ಕೆ ನಿರ್ದಿಷ್ಟವಾದ ಕಾನೂನನ್ನು ತನ್ನಿ. ಅಂಥವರನ್ನು ಎತ್ತಂಗಡಿ ಮಾಡಬೇಕು. ಅದನ್ನು ಮಾಡಿದರೆ ಮಾತ್ರ ಒಳ್ಳೆಯದಾಗುತ್ತದೆ ಎಂದು ನಾನು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಒಂದು ವಿಷಯ, ಇದರಲ್ಲಿ ಸ್ವಲ್ಪ contradiction ಆಗುತ್ತಿದೆ.

ಅಧ್ಯಕ್ಷರು:- ಈಗ ಈ ಕಾನೂನಿನ ಅವಶ್ಯಕತೆ ಇದೆಯೋ, ಇಲ್ಲವೋ? ಇದೆ. ಹಾಗಿದ್ದಮೇಲೆ, ಕಾನೂನಿನಲ್ಲಿ ಎಲ್ಲಿ ಲೋಪವಿದೆ ಎನ್ನುವುದನ್ನು ಎತ್ತಿಹೇಳಿ.

ಶ್ರೀ ಬಿ.ಆರ್. ಪಾಟೀಲ್:- ನಾನು ಅದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. ಕೆರೆ ಒತ್ತುವರಿ ಸದನ ಸಮಿತಿಯ ಅಧ್ಯಕ್ಷರಾದಂಥ ಕೋಳಿವಾಡರವರು ತಮ್ಮದೇ ಆದಂಥ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ನಾಳೆ ಆ ಸಮಿತಿಯೇನಾದರೂ ಹೆಚ್ಚು ಕಡಿಮೆ ವರದಿ ಕೊಟ್ಟರೆ ಮತ್ತು ಸಮಸ್ಯೆ ಉದ್ಭವವಾಗುತ್ತದೆ. ಅದಕ್ಕೆ ನನ್ನ ಸಲಹೆ ಎಂದರೆ, ಸಮಿತಿಯ ಸಮಗ್ರವಾದಂಥ ಒಂದು ವರದಿ ಬರಲಿ. ವರದಿ ಬಂದ ಮೇಲೆ ಈ ವಿಧೇಯಕವನ್ನು ತೆಗೆದುಕೊಂಡು ಬನ್ನಿ. ಏಕೆಂದರೆ ಸೆಕ್ಷನ್ 49 ರ ಬಗ್ಗೆ ಅವರೇ ಒಂದು ಅಭಿಪ್ರಾಯ ಹೊಂದಿದ್ದಾರೆ. ಅದರ ಬಗ್ಗೆ ಅವರಿಗೇ ಬೇರೆ ಅಭಿಪ್ರಾಯವಿದೆ. ಆ ಸಮಿತಿಯ ವರದಿ ಬಂದ ಮೇಲೆ ಬೇಕಾದರೆ ಇದನ್ನು ಚರ್ಚೆ ಮಾಡೋಣ.

ಶ್ರೀ ಬಿ. ರಮಾನಾಥ ರೈ:- ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಈಗಾಗಲೇ ಈ ರೀತಿಯ ಒಂದು ವಿಧೇಯಕವನ್ನು ನಗರ ವ್ಯಾಪ್ತಿಯ ಹೊರಗಡೆ ಇರುವ ಕೆರೆಗಳಿಗೆ ಸಂಬಂಧಿಸಿದಂತೆ ಒಂದು ಪ್ರಾಧಿಕಾರ ರಚನೆ ಮಾಡಲು ಇದೇ ಸದನದಲ್ಲಿ ಒಪ್ಪಿಗೆ ಕೊಡಲಾಗಿದೆ. ಅದೇ ರೀತಿಯಲ್ಲಿ, ನಗರ ವ್ಯಾಪ್ತಿಯಲ್ಲಿರುವ ಕೆರೆಗಳ ಸಂರಕ್ಷಣೆ ಮಾತ್ರವಲ್ಲ, ರಾಜಕಾಲುವೆಗಳನ್ನು ಮುಚ್ಚಿರುವಂಥಾದ್ದು ಇರಬಹುದು ಅಥವಾ ಕಲುಷಿತವಾಗಿರುವಂಥಾದ್ದು ಇರಬಹುದು, ಬೇರೆ ಬೇರೆ ಕಾರಣಗಳಿಂದ ಸರೋವರಗಳ nature ಹಾಳಾಗುತ್ತಿದ್ದು, ಅದನ್ನು ಸರಿಪಡಿಸಲು ಇದನ್ನು ತರುತ್ತಿದ್ದೇವೆ. ಇದನ್ನು ಯಥಾಸ್ಥಿತಿಯಲ್ಲಿ ಮುಂದುವರೆಯಲು ಬಿಟ್ಟರೆ ಪಟ್ಟಣಗಳಲ್ಲಿ ಮುಂದೆ ಒಂದೇ ಒಂದು ಕೆರೆಯೂ ಉಳಿಯಲು ಸಾಧ್ಯವಿಲ್ಲ ಎನ್ನುವುದು ನನ್ನ ಅಭಿಮತ. ಅದಕ್ಕಾಗಿ ದಯಮಾಡಿ ನಾವು ತಂದಿರುವ ಇಂಥ ಒಂದು ವಿಧೇಯಕಕ್ಕೆ ಸರ್ವರೂ ಕೂಡ ಸಹಕರಿಸಬೇಕು. ಇದು ದುರುದ್ದೇಶವನ್ನಿಟ್ಟುಕೊಂಡು ತಂದಿರುವ ವಿಧೇಯಕ ಖಂಡಿತಾ ಅಲ್ಲ, ಸದುದ್ದೇಶವನ್ನು ಇಟ್ಟುಕೊಂಡು ತಂದಿರುವ ವಿಧೇಯಕ. ಇದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಈಗಾಗಲೇ Lake Development Authority ಎಂದು ಮಾಡಿದ್ದೇವೆ. ಹಿಂದೆ ಕಾನೂನು ಇತ್ತು. ಕಾನೂನು ಇದ್ದಾಗಲೂ ನಾವು ಏಕೆ ಆ ಬಿಲ್ ಪಾಸ್ ಮಾಡಿದೆವು ಎಂದರೆ ಆ ಕೆರೆಗಳನ್ನು ರಕ್ಷಣೆ ಮಾಡಬೇಕು, ಜೀರ್ಣೋದ್ಧಾರ ಮಾಡಬೇಕು ಎನ್ನುವ ಉದ್ದೇಶದಿಂದ ಮಾಡಿದೆವು. ಇಲ್ಲಿ ಕೆರೆಗಳ ರಕ್ಷಣೆಯ ಜೊತೆಗೆ ಜೀರ್ಣೋದ್ಧಾರವೂ ಅಡಗಿದೆ. Gap ಇದ್ದದ್ದು ಏನೆಂದರೆ, ಇದು ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಇರಲಿಲ್ಲ. ಅದಕ್ಕೋಸ್ಕರ ಸಚಿವ ಸಂಪುಟ ನಿರ್ಣಯ ಮಾಡಿ ಪಟ್ಟಣ ಪ್ರದೇಶಕ್ಕೆ ಒಂದು ಕಾನೂನು ತರಬೇಕು ಎಂದು ಇದನ್ನು ಮಾಡಿದ್ದೇವೆ. ಎರಡು ವಿಭಿನ್ನವಾಗಿರುವಂಥ ಚರ್ಚೆ ಈ ಸಭೆಯಲ್ಲಿ ಬರುತ್ತಿದೆ. ಸರ್ಕಾರದಿಂದ encroachment ಆದಂಥ ಸಂದರ್ಭದಲ್ಲಿ ಅದನ್ನು ಹೇಗೆ ಮಾಡುತ್ತೀರಿ ಎನ್ನುವುದು ಒಂದು ಪ್ರಶ್ನೆ. ಅಕ್ರಮವಾಗಿ ಕಟ್ಟಡ ಕಟ್ಟಿರುವಂಥವರನ್ನು ಯಾವ ರೀತಿ evict ಮಾಡಿಸುತ್ತೀರಿ ಎನ್ನುವುದು ಎರಡನೇ ಪ್ರಶ್ನೆ. ಇದು ಎಲ್ಲವನ್ನೂ ಕೂಡ ಗಮನದಲ್ಲಿಟ್ಟುಕೊಂಡು ಕಾನೂನು ತಂದಿದ್ದೇವೆ. ನಿಯಮ 15, 16 ಮತ್ತು 24 ರಲ್ಲಿ ಎಲ್ಲ ರೀತಿಯಲ್ಲೂ ಅಂಥವುಗಳನ್ನು evict ಮಾಡುವಂಥ ಅಧಿಕಾರರ ಇದ್ದೇ ಇದೆ. Lake Development Authority ಯನ್ನು ಮಾಡಿದ ಮೇಲೆ ಈಗಾಗಲೇ ಒತ್ತುವರಿ ತೆರವು ಕಾರ್ಯಕ್ರಮಗಳು ಎಲ್ಲ ಕಡೆ ನಡೆಯುತ್ತಿವೆ. ಕೆರೆಗಳ ಸಂರಕ್ಷಣೆ ಮಾಡುವುದಕ್ಕೋಸ್ಕರ ಇದನ್ನು ಮಾಡುತ್ತಿದ್ದೀರಿ ಎಂದು ಗ್ರಾಮಾಂತರ ಪ್ರದೇಶಗಳಲ್ಲಿ ಬಹಳಷ್ಟು ಜನ ಇದನ್ನು ಸ್ವಾಗತ ಮಾಡುತ್ತಿದ್ದಾರೆ. ಎಲ್ಲೋ ಒಂದು ಕಡೆ ಸಂಘರ್ಷ ಇದ್ದೇ ಇರುತ್ತದೆ, ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲರಿಗೂ ಕೂಡ ರಕ್ಷಣೆ ಕೊಡುವುದಕ್ಕಾಗುವುದಿಲ್ಲ. ಇದರಲ್ಲಿ ನಾವೇನಾದರೂ ಬಿಗಿಯಾಗಿರದಿದ್ದರೆ ಖಂಡಿತವಾಗಿ ಪಟ್ಟಣ ಪ್ರದೇಶಗಳಲ್ಲಿ ಒಂದೇ ಒಂದು ಕೆರೆಯನ್ನು ಉಳಿಸಲು ಆಗುವುದಿಲ್ಲ. ನೀರನ್ನೂ ರಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ. ಕರೆಗಳನ್ನು ಅಭಿವೃದ್ಧಿ ಮಾಡಬೇಕು. ಕೆರೆಗಳಲ್ಲಿ ನೀರಿಲ್ಲ ಎನ್ನುವ ಕಾರಣಕ್ಕಾಗಿ ಇವತ್ತು ಅವುಗಳನ್ನು ಯಾರು ಬೇಕಾದರೂ ಒತ್ತುವರಿ ಮಾಡಬಹುದು ಎನ್ನುವುದಲ್ಲ ರಮೇಶ್ ಕುಮಾರ್‌ರವರು ಹೇಳಿದ ರೀತಿಯಲ್ಲಿ, ಹಳ್ಳಿಗಳ ಮಟ್ಟದಲ್ಲಿ

ಕೆರೆಗಳನ್ನು ರಕ್ಷಣೆ ಮಾಡುವುದಕ್ಕೆ ಕಾನೂನು ಇದ್ದಾಗಲೂ ಸಹ ವಿಶೇಷವಾದಂಥ ಒಂದು ಕಾನೂನು ತಂದಿದ್ದೇವೆ. ಅದೇ ರೀತಿ ಇಲ್ಲೂ ಕೂಡ ಅಂಥ ವಿಶೇಷವಾದ ಕಾನೂನಿನ ಅವಶ್ಯಕತೆ ಇದೆ ಎನ್ನುವುದನ್ನು ಮನದಟ್ಟು ಮಾಡುತ್ತಿದ್ದೇವೆ. ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಕೋಳಿವಾಡ್‌ರವರ ಸಮಿತಯು ತನ್ನ ವರದಿಯನ್ನು ಕೊಡಲಿ. ಬಹುಶಃ ಅವರು ಇನ್ನು ಎರಡು–ಮೂರು ತಿಂಗಳಲ್ಲಿ ವರದಿಯನ್ನು ಕೊಡಬಹುದು. ವರದಿಯನ್ನು ಕೊಟ್ಟ ಮೇಲೆ, ನಿಯಮಗಳನ್ನು ಮಾಡುವಾಗ ಆ ವರದಿಯನ್ನೂ ಕೂಡ ಗಮನದಲ್ಲಿಟ್ಟುಕೊಂಡು ನಾವು ನಿಯಮಗಳನ್ನು ಮಾಡುತ್ತೇವೆ. ನಿಯಮಗಳನ್ನು ನೋಟಿಫೈ ಮಾಡಿದಂಥ ಸಂದರ್ಭದಲ್ಲಿ ಸಾರ್ವಜನಿಕರೂ ಕೂಡ ಅವುಗಳಿಗೆ ಆಕ್ಷೇಪಗಳನ್ನು ಸಲ್ಲಿಸಲು ಅವಕಾಶವಿರುತ್ತದೆ. ನಿಯಮಗಳನ್ನು ಸದನದ ಮುಂದೆ ತರುವುದು ಇಲ್ಲದಿದ್ದರೂ ಕೂಡ ಸದನದ ಮುಂದೆ ಬಂದು ಚರ್ಚೆ ಮಾಡಿ ನಿಯಮಗಳನ್ನು ಮಾಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಯಾವುದೇ ರೀತಿಯಲ್ಲಾದರೂ ಕೆರೆಗಳನ್ನು ರಕ್ಷಣೆ ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಇಷ್ಟಪಡುತ್ತೇನೆ. ಸಣ್ಣಪುಟ್ಟವರಿಗೂ ಅವಕಾಶಗಳನ್ನು ಕೊಡುತ್ತೇವೆ ಎಂದು ಅವರು ಹೇಳಿದರು. ಮೊನ್ನೆ ನಾನು ಒಂದು ಹೈಕೋರ್ಟ್ ತೀರ್ಪನ್ನು ನೋಡಿದೆ. ಚಿಕ್ಕಲ್ಲಸಂದ್ರ ಕೆರೆ ಒತ್ತುವರಿಯಾಗಿತ್ತು ಎಂದು ಹೇಳಿ ಅಧಿಕಾರಿಗಳು ಮೊದಲು ಅಲ್ಲಿಗೆ ಹೋಗಿ, ಕೂಲಿ ಕೆಲಸ ಮಾಡುವವರು ಸಣ್ಣ ಷೆಡ್‌ಗಳನ್ನು ಹಾಕಿಕೊಂಡಿದ್ದಂಥಾದನ್ನು ಒಡೆದು ಹಾಕಿದರು. ದೊಡ್ಡದೊಡ್ಡ ಬಿಲ್ಡಿಂಗ್ ಕಟ್ಟಿದ್ದವರನ್ನು ಮುಟ್ಟಲಿಲ್ಲ. ಅವರು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ಏನು ಹೇಳಿದರು ಎಂದರೆ ಇಲ್ಲಿ ಗುಡಿಸಲುಗಳು ಕಾಣುತ್ತಿಲ್ಲ, ದೊಡ್ಡ ಕಟ್ಟಡಗಳಿವೆ, ಹಾಗಾಗಿ ಅವುಗಳನ್ನು ಒಡೆಯುವುದಕ್ಕೆ ಅವಕಾಶ ಕೊಡುವುದು ಬೇಡವೆಂದು ಹೇಳಿ ಸ್ಟೇ ಕೊಡುತ್ತಿದ್ದೇವೆ ಎಂದು ಹೇಳಿದರು. ಇನ್ನೊಂದು ಪ್ರಕರಣದಲ್ಲಿ ಒಬ್ಬ ದೊಡ್ಡ

ಬಿಲ್ಡರ್ ಒಂದು ದೊಡ್ಡ ಕಟ್ಟಡವನ್ನು, ಗುಂಪು ಮನೆಗಳನ್ನು ಕಟ್ಟಿದ್ದಾನೆ. ಕಟ್ಟುವಾಗ ರಾಜ ಕಾಲುವೆಯನ್ನೂ ಸೇರಿಸಿ ಕಟ್ಟಿದ್ದಾನೆ. ಅ ಪ್ರಕರಣದ ಜಡ್ಜ್ ಏನು ಹೇಳುತ್ತಾರೆ ಎಂದರೆ, ರಾಜಕಾಲುವೆಯನ್ನು ಪಕ್ಕಕ್ಕೆ ತಳ್ಳುವುದಕ್ಕೆ ಆಗುವುದಿಲ್ಲವೆ, deviation ಮಾಡುವುದಕ್ಕೆ ಆಗುವುದಿಲ್ಲವೇ ಎಂದು ಹೇಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ:- ಈ ವಿಧೇಯಕದಿಂದ ಮುಂದೆ ಇದು ಪುನರಾವರ್ತನೆಯಾಗದಂತೆ, ಕೆರೆಗಳನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಹೆಚ್.ಡಿ. ಕುಮರಸ್ವಾಮಿ:- ಇದನ್ನು ಬಡವರಿಗೆ ರಕ್ಷಣೆ ಕೊಡಲು ತರುತ್ತಿದೀರೋ ಅಥವಾ ಶ್ರೀಮಂತರಿಗೆ ರಕ್ಷಣೆ ಕೊಡಲು ತರುತ್ತಿದ್ದೀರೋ ಎಂದು ಕೇಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ:- ಯಾವುದೇ ರೀತಿಯ encroachment ಇದ್ದರೂ ಕೂಡ ತೆಗೆಯುವುದಕ್ಕೆ ಅವಕಾಶವಿದೆ. ಈ ಕಾನೂನನ್ನು ತರುವುದಕ್ಕೆ ಕಾರಣವೆಂದರೆ, ಸರ್ವೋಚ್ಚ ನ್ಯಾಯಾಲಯದ ತೀರ್ಪೂ ಸಹ ಒಂದು ಮುಖ್ಯವಾದಂಥ ಅಂಶ. ಅವರು ಕೊಟ್ಟಂಥ ನಿರ್ದೇಶನದ ಮೇಲೆ, ಇವತ್ತು ಯಾವ ರೀತಿಯಿಂದಲಾದರೂ ಕೆರೆಗಳನ್ನು ರಕ್ಷಣೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನಲೆಯಲ್ಲಿ ಇದನ್ನು ತಂದಿದ್ದೇವೆ. ನಾನು ಈಗಾಗಲೇ ಹೇಳಿದ್ದೇನೆ, We will wait for Koliwad's report also. Rules ತರುವಂಥ ಸಂದರ್ಭದಲ್ಲಿ ಸದನಕ್ಕೆ ಮಾಹಿತಿಯನ್ನು ಕೊಟ್ಟು ತರುತ್ತೇವೆ.

ಅಧ್ಯಕ್ಷರು:- ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ:

'2014 ನೇ ಸಾಲಿನ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆ ಮುಂದೆ ಇದೆ'

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

2 ರಿಂದ 52 ರ ವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.

"2 ರಿಂದ 52 ರ ವರೆಗಿನ ಖಂಡಗಳು ವಿಧೇಯಕದ ಅಂಗವಾದವು."

ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆ

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆನ್ನುವುದು ಸಭೆಯ ಮುಂದಿರುವ ವಿಷಯ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಅಂಗೀಕಾರ ಪ್ರಸ್ತಾವ

2014 ನೇ ಸಾಲಿನ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖಾ ಸಚಿವರು):- ಮಾನ್ಯ ಅಧ್ಯಕ್ಷರೆ, 2014 ನೇ ಸಾಲಿನ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ:

"2014 ನೇ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ